ಶ್ರೀಶಂಕರಾಚಾರ್ಯವಿರಚಿತ

ಶಿವಾನಂದಲಹರೀ

(ಮೂಲ ಮತ್ತು ತಾತ್ಪರ್ಯಸಹಿತ)

ಶ್ರೀರಾಮಕೃಷ್ಣ ಆಶ್ರಮ
ಮೈಸೂರು

ಬೆಲೆ ೫೦ ಪೈಸಾ

ಪ್ರಥಮ ಮುದ್ರಣ ೧೯೫೭

ಪ್ರಕಾಶಕರು :

ಅಧ್ಯಕ್ಷರು

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಪ್ರಕಾಶಕರ ಬಿನ್ನಹ

"ಜೀವೋಬ್ರಹ್ಮೈವ ನ ಪರಃ" ಎಂದು ಸಾರಿದ ಅದ್ವೈತಕೇಸರಿ ಶಂಕರಾಚಾರ್ಯರು ಭಕ್ತಿರಸದಿಂದ ತುಂಬಿ ತುಳುಕಾಡುತ್ತಿರುವ ಈ ಶಿವಾನಂದ ಲಹರಿಯನ್ನು ಬರೆದಿರುವರು ಎಂಬ ಪ್ರತೀತಿ ಇದೆ. ಜೀವ ಬ್ರಹ್ಮನೇ ಹೊರತು ಬೇರೆ ಅಲ್ಲ ಎಂದು ಹೇಳುವ ಸಿದ್ಧಾಂತದಲ್ಲಿ ಭಕ್ತಿಗೆ ಅವಕಾಶವಾದರೂ ಇದೆಯೆ ಎಂಬ ಸಂದೇಹ ಬರುವುದು. ಜ್ಞಾನ ಮತ್ತು ಭಕ್ತಿ ಒಂದು ಇದ್ದರೆ ಮತ್ತೊಂದು ಇರಲಾರದು ಎಂಬುದು ಸಾಧಾರಣ ಮಾನವರ ಒಂದು ಅಭಿಪ್ರಾಯ. ಆದರೆ ಶಂಕರಾಚಾರ್ಯರು ಜ್ಞಾನಪರಾಕಾಷ್ಠತೆಗೆ ಏರಿದ್ದರೂ ಭಕ್ತಿ ಅವರಿಗೆ ಹಗೆಯಲ್ಲ. ಜ್ಞಾನಮಾರ್ತಾಂಡ ಆಕಾಶದಲ್ಲಿ ಬೆಳಗುವಂತೆಯೇ ಚಂದ್ರಮನ ಶೀತಲ ಕಾಂತಿಯೂ ರಾತ್ರಿಯ ಅದೇ ಆಕಾಶದಲ್ಲಿ ಬೆಳಗುವುದು. ಅಂತೆಯೇ ಶಂಕರಾಚಾರ್ಯರಲ್ಲಿ ಭಕ್ತಿಜ್ಞಾನಗಳ ಸಮ್ಮಿಶ್ರಣವನ್ನು ನೋಡುವೆವು.

ಶ್ರೀ ಶಂಕರಾಚಾರ್ಯರು ಪ್ರಸ್ಥಾನತ್ರಯಗಳಿಗೆ ಬರೆದಿರುವ ಭಾಷ್ಯ ಮತ್ತು ಹಲವು ಪ್ರಕರಣಗ್ರಂಥಗಳಲ್ಲಿ ಅದ್ವೈತ ವೇದಾಂತ ಸಿದ್ಧಾಂತವನ್ನು ಒಂದು ವಜ್ರತಳಹದಿಯ ಮೇಲೆ ಕಟ್ಟುವರು. ಆದರೆ ಶಂಕರಾಚಾರ್ಯರು ಎಲ್ಲೋ ಕೆಲವು ಜ್ಞಾನನುಳ್ಳರಿಗೆ ಮಾತ್ರ ಬಂದವರಲ್ಲ. ಈ ಜೀವನದಲ್ಲಿ ಭಕ್ತಿಯ ಹಾದಿಯಲ್ಲಿ ನಡೆಯುವವರೇ ಅಧಿಕಾಂಶ. ಅವರನ್ನೂ ಆಚಾರ್ಯರು ಮರೆಯಲಿಲ್ಲ. ಅವರಿಗಾಗಿ ಹಲವು ಸ್ತೋತ್ರಗಳನ್ನು ರಚಿಸಿರುವರು. ದೇವಿ ವಿಷ್ಣು ಶಿವ ಎಂಬ ಯಾವ ಪಕ್ಷಪಾತವಿಲ್ಲದೆ ಎಲ್ಲರಮೇಲೆಯೂ ಭಕ್ತಿರಸದಿಂದ ತುಂಬಿ ತುಳುಕಾಡುವಂತಹ ಶ್ಲೋಕಗಳನ್ನು ರಚಿಸಿರುವರು.

ಎಲ್ಲಿಯವರೆಗೆ ನಮಗೆ ದೇಹಭಾವವಿದೆಯೋ, ಎಲ್ಲಿಯವರೆಗೆ ನಮಗೆ ಜೀವಭಾವವಿದೆಯೋ, ಅಲ್ಲಿಯವರೆಗೆ ನಮಗೆ ಒಬ್ಬ ಸಗುಣದೇವರು ಉಪಾಸನೆಗೆ ಬೇಕಾಗುವುದು. ಇದನ್ನು ಮೀರಿ ಹೋದರೆ ಇದರ ಆವಶ್ಯಕತೆ ಇಲ್ಲದಿರಬಹುದು. ಆದರೆ ಇದನ್ನು ಮೀರಿ ಹೋಗುವಂತಹವರ ಸಂಖ್ಯೆ ಯಾವಾಗಲೂ ಅತಿವಿರಳ. ಉಳಿದವರೆಲ್ಲ ನಾಮರೂಪ, ಕಾಲದೇಶ, ಕಾರ್ಯ

ಕಾರಣದ ಬೇಲಿಯೊಳಗೆ ಜೀವಿಸುತ್ತಿರುವರು. ಆಗ ಒಬ್ಬ ಪರಮೇಶ್ವರ ಉಪಾಸಕನಿಗೆ ಬೇಕಾಗಿದೆ. ಭವಯಾತ್ರೆಯಲ್ಲಿ ನಡೆಯುತ್ತಿರುವಾಗ ಅವನಿಗೊಂದು ಊರುಗೋಲು ಬೇಕು. ಅವನ ಕಷ್ಟಸುಖಗಳನ್ನೆಲ್ಲಾ ಒಬ್ಬನ ಹತ್ತಿರ ತೋಡಿ ಹೃದಯವನ್ನು ಹಗುರಮಾಡಿಕೊಳ್ಳಲು ಒಬ್ಬ ವ್ಯಕ್ತಿಬೇಕು. ನಿರಾಶೆ, ದುಃಖ, ಕೋಟಲೆಯ ಕಣಿವೆಯೊಳಗೆ ಹೋಗುತ್ತಿರುವಾಗ ಇವನಿಗೆ ಭರವಸೆಯನ್ನಿತ್ತು ರಕ್ಷಿಸುವವನೊಬ್ಬ ಬೇಕು. ಇದನ್ನು ಮನಗಂಡೇ ಶ್ರೀ ಶಂಕರಾಚಾರ್ಯರು ಸಾರಿದ "ಜೀವೋಬ್ರಹ್ಮೈವ ನ ಪರಃ" ಎಂಬ ಸಿದ್ಧಾಂತಕ್ಕಿಂತ "ಭಜಗೋವಿಂದಂ ಭಜಗೋವಿಂದಂ ಮೂಢಮತೇ" ಎಂಬ ಪಲ್ಲವಿ ಹೆಚ್ಚು ಉಪಾಸಕರ ನಾಲಿಗೆಯ ಮೇಲೆ ನಲಿದಾಡುತ್ತಿದೆ.

"ಶಿವಾನಂದಲಹರೀ" ಆಚಾರ್ಯರ ಹೃದಯದಿಂದ ಭವಜೀವಿಗಳ ಅಘಮೋಚನೆಗೆ ಇಳಿದುಬಂದ ಭಕ್ತಿಗಂಗೆಯಂತೆ ಇದೆ. ಇಲ್ಲಿ ಬರುವ ಪ್ರತಿಯೊಂದು ಶ್ಲೋಕವೂ ಭಕ್ತ ಭಗವಂತನೊಡನೆ ಐಕ್ಯವಾಗಬೇಕೆಂದು ಬಯಸುವ ಅಭೀಪ್ಸೆಯನ್ನು ವ್ಯಕ್ತಪಡಿಸುವುದು. ಒಂದೊಂದು ಶ್ಲೋಕದಲ್ಲಿಯೂ ಒಂದೊಂದು ಬಗೆಯ ಉಪಮಾನವನ್ನು ತರುವರು. ಒಂದೊಂದು ರೀತಿಯಲ್ಲಿ ಭಕ್ತನನ್ನು ಭಗವಂತನೊಂದಿಗೆ ಕಟ್ಟಿಹಾಕುವರು.

ಇವರ ಶೈಲಿ ಕವಿತಾಶೈಲಿ. ಉಪಮಾನಗಳ ಗೊಂಚಲನ್ನೇ ಇಲ್ಲಿ ಕಾಣುವೆವು. ಬರುವ ವೃತ್ತಗಳಂತೂ ಕಾಲಿಗೆ ಕಿರುಗೆಜ್ಜೆಯನ್ನು ಕಟ್ಟಿಕೊಂಡು ಝುಣಝುಣರೆಂದು ಅಲಿಗಾಡಿಸುತ್ತ ಶಿವನ ಸುತ್ತಲೂ ಮಾಡುತ್ತಿರುವ ನೃತ್ಯದಲ್ಲಿ ವೈಮರೆತವನ ದೃಶ್ಯವನ್ನು ನಮ್ಮ ಕಣ್ಣಿಗೆ ಕಟ್ಟಿದಂತೆ ಆಗುವದು. ಇಲ್ಲಿ ಬರುವ ಭಕ್ತಿಭಾವಗಳಂತೂ ಅತ್ಯಂತ ಉತ್ತಮದರ್ಜೆಗೆ ಸೇರಿದವು. ಭಕ್ತಿಮುಕ್ತಿಯನ್ನು ಯಾಚಿಸುವರೇ ಹೊರತು ಪ್ರಾಪಂಚಿಕ ಕಲ್ಯಾಣಗಳನ್ನು ಬಯಸುವವರಲ್ಲ.

ಶಿವ ನನ್ನ ಮನಸ್ಸೆಂಬ ಮರ್ಕಟವನ್ನು ಭಕ್ತಿಯ ದಾರದಿಂದ ಕಟ್ಟಿಹಾಕು ಎನ್ನುವರು. ನೀನು ಆದಿ ಕಿರಾತ, ನನ್ನ ಮನಸ್ಸೆಂಬ ಅಡವಿಯೊಳಗೆ ಬಂದು ವಾಸಿಸು. ಅಲ್ಲಿ ಕಾಮಕ್ರೋಧಾದಿ ಷಡ್ರಿಪುಗಳೆಂಬ ಘೋರ ಮೃಗಗಳಿವೆ. ಅದನ್ನು ಬೇಟೆಯಾಡಿ ಆನಂದದಿಂದ ವಿಹರಿಸು ಎನ್ನುವರು

ನಮ್ಮ ಲಲಾಟದ ಮೇಲೆ ಬರೆದಿರುವುದನ್ನು ಶಿವನಿಗೆ ಅಳಿಸುವುದು ಸುಲಭ ಎಂದು ಬೇಡುವರು. ಬ್ರಹ್ಮನ ಒಂದು ತಲೆಯನ್ನೇ ತನ್ನ ಉಗುರಿನಲ್ಲಿ ತೆಗೆದವನಿಗೆ ನಮ್ಮ ಹಣೆಯ ಮೇಲೆ ಅವನು ಕೈಗಳಿಂದ ಬರೆದ ಬರಹವನ್ನು ಅಳಿಸುವುದು ಸಾಧ್ಯವಿಲ್ಲವೆ ಎಂದು ಕೇಳುವರು. ಶಿವ ಕೈಲಾಸದ ಕಲ್ಲಿನ ಮೇಲೆ ಏತಕ್ಕೆ ನಡೆಯಲು ಅಭ್ಯಾಸಮಾಡಿದನು ಎಂಬುದನ್ನು ಎಷ್ಟು ಮನೋಹರವಾಗಿ ಆಚಾರ್ಯರು ಬಣ್ಣಿಸುವರು. ಮುಂದೆ ಭಕ್ತನ ಹೃದಯದಲ್ಲಿ ಸಂಚರಿಸಬೇಕಾಗುವುದು. ಅವನ ಹೃದಯ ಬಹಳ ಒರಟು, ಅದಕ್ಕಾಗಿ ಅವನು ಕೈಲಾಸದ ಕಲ್ಲಿನಮೇಲೆ ಈಗಿನಿಂದಲೂ ನಡೆದು ಅಭ್ಯಾಸಮಾಡಿ ಕೊಳ್ಳುತ್ತಿರುವನು! ಶಿವನ ಲೋಕಾನುಕಂಪನವನ್ನು ವಿವರಿಸುವ ಶ್ಲೋಕ ವಂತೂ ಭವ್ಯತೆಯ ಶಿಖರವನ್ನೇ ಮುಟ್ಟಿದೆ. ಸಮುದ್ರವನ್ನು ಕಡೆಯುತ್ತಿ ದ್ದಾಗ ಹಾಲಾಹಲವೆಂಬ ವಿಷ ಉದಿಸಲು ಅದಕ್ಕೆ ಅಂಜಿ ದೇವದಾನವರು ಪಲಾಯನ ಮಾಡುತ್ತಿದ್ದಾಗ ಶಿವ ಮುಂದೆ ಬಂದು ಹೊರಗಿನ ಲೋಕವನ್ನು ರಕ್ಷಿಸುವುದಕ್ಕಾಗಿ ಅದನ್ನು ತಾನು ಸ್ವೀಕರಿಸಿದನು. ಅದನ್ನು ಪೂರ್ತಿ ನುಂಗಲೂ ಇಲ್ಲ. ಏಕೆಂದರೆ ಅವನ ಒಳಗಿರುವ ಲೋಕವೆಲ್ಲ ಎಲ್ಲಿ ನಾಶವಾಗು ವುದೋ ಎಂದು. ಅದು ಕೊರಳ ಮಧ್ಯದಲ್ಲೆ ನಿಂತು ಅವನು ನೀಲಕಂಠ ನಾದನು. ಹೀಗೆ ಹಲವು ಭಾವ ಗೊಂಚಲನ್ನು ಈ ಶತಶ್ಲೋಕದಲ್ಲಿ ಕಾಣು ವೆವು. ಪ್ರತಿಯೊಂದು ಶ್ಲೋಕವನ್ನೂ ಭಕ್ತಿಯ ಜೇನಿನಲ್ಲಿ ಅದ್ದಿದಂತೆ ಇದೆ. ಇದನ್ನು ಓದುವಾಗ ಅದು ವೇದ್ಯವಾಗುವುದು.

ಪ್ರತಿದಿನ ಪಾರಾಯಣಮಾಡಲು ಯೋಗ್ಯವಾದ ಸ್ತೋತ್ರ ಇದು. ಅರ್ಥಸಹಿತ ಮಾಡಿದರೆ ನಮಗೆ ಹೆಚ್ಚು ಪ್ರಯೋಜನವಾಗುವುದೆಂದು ಶ್ಲೋಕದ ಪಕ್ಕದಲ್ಲೆ ಅದರ ತಾತ್ಪರ್ಯವನ್ನು ಕೊಟ್ಟಿರುವೆವು.

ಪ್ರಕಾಶಕರು.

ಶಿವಾನಂದಲಹರೀ

ಶಿವಾನಂದಲಹರೀ

ಕಲಾಭ್ಯಾಂ ಚೂಡಾಲಂಕೃತ ಶಶಿಕಲಾಭ್ಯಾಂ ನಿಜ ತಪಃ
ಫಲಾಭ್ಯಾಂ ಭಕ್ತೇಷು ಪ್ರಕಟಿತ ಫಲಾಭ್ಯಾಂ ಭವತು ಮೆ ।
ಶಿವಾಭ್ಯಾಮಸ್ತೋಕ ತ್ರಿಭುವನ ಶಿವಾಭ್ಯಾಂ ಹೃದಿ ಪುನ-
ರ್ಭವಾಭ್ಯಾಂ ಮಾನಂದಸ್ಫುರದನುಭ್ಯಾಂ ನತಿರಿಯಂ ॥೧॥

ಗಳಂತೀ ಶಂಭೋ! ತ್ವಚ್ಚರಿತ ಸರಿತಃ ಕಿಲ್ಬಿಷರಜೋ-
ದಳಂತೀ ಧೀಕುಲ್ಯಾಸರಣಿಷು ಪತಂತಿ ವಿಜಯತಾಮ್ ।
ದಿಶಂತೀ ಸಂಸಾರಭ್ರಮಣ ಪರಿತಾಪೋಪಶಮನಂ
ವಸಂತೀ ಮಚ್ಚೇತೋ ಹೃದಿಭುವಿ ಶಿವಾನಂದಲಹರೀ ॥೨॥

ತ್ರಯೀವೇದ್ಯಂ ಹೃದ್ಯಂ ತ್ರಿಪುರಹರಮಾದ್ಯಂ ತ್ರಿನಯನಂ
ಜಟಾಭಾರೋದಾರಂ ಚಲದುರಗಹಾರಂ ಮೃಗಧರಮ್ ।
ಮಹಾದೇವಂ ದೇವಂ ಮಯಿಸದಯಭಾವಂ ಪಶುಪತಿಂ
ಚಿದಾಲಂಬಂ ಸಾಂಬಂ ಶಿವಮತಿವಿಡಂಬಂ ಹೃದಿಭಜೆ ॥೩॥

ಸಹಸ್ರಂ ವರ್ತಂತೆ ಜಗತಿ ವಿಬುಧಾಃ ಕ್ಷುದ್ರಫಲದಾಃ
ನಮನ್ಯೆ ಸ್ವಪ್ನೇವಾ ತದನುಸರಣಂ ತತ್ಕೃತಫಲಂ ।
ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ
ಚಿರಂ ಯಾಚೆ ಶಂಭೋ ಶಿವ ತವ ಪದಾಂಭೋಜಭಜನಂ ॥೪॥

ಸಕಲ ಕಲಾಸ್ವರೂಪನಾದ, ಶಿಖೆಯಲ್ಲಿ ಚಂದ್ರನಿಂದ ಅಲಂಕೃತನಾದ, ನಿಜತಪಸ್ಸಿನ ಫಲಸ್ವರೂಪನಾದ, ಭಕ್ತರಲ್ಲಿ ಪ್ರಕಟಿಸಲ್ಪಟ್ಟಿರುವ ಧರ್ಮಗಳುಳ್ಳ, ತ್ರಿಭುವನಗಳಿಗೂ ಅತಿಶಯವಾಗಿ ಮಂಗಳಕರನಾಗಿರುವಂತಹ, ಹೃದಯದಲ್ಲಿ ಭಕ್ತರು ಧ್ಯಾನಮಾಡುವಾಗ ಉದಯಿಸುತ್ತಿರುವಂತಹ, ಆನಂದದಿಂದ ಪ್ರಕಾಶಿಸುತ್ತಿರುವ ಅನುಭವಜ್ಞಾನವುಳ್ಳ ಪರಮಶಿವನಿಗೆ ನನ್ನ ನಮಸ್ಕಾರ. ||೧||

ಹೇ ಶಂಭೋ, ನಿನ್ನ ಚರಿತ್ರ ಸರೋವರದಿಂದ ಜಾರುತ್ತಿರುವ, ಪಾಪಧೂಳಿಯನ್ನು ತೊಳೆಯುತ್ತಿರುವ, ಬುದ್ಧಿಯೆಂಬ ಕಾಲುವೆಗಳ ಮಾರ್ಗದಲ್ಲಿ ಬೀಳುತ್ತಿರುವ, ಸಂಸಾರಭ್ರಮಣದಿಂದ ಉಂಟಾದ ಕ್ಲೇಶಕ್ಕೆ ಶಾಂತಿಯನ್ನು ಕೊಡುತ್ತಿರುವ ನನ್ನ ಮನಸ್ಸೆಂಬ ಮಡುವಿನಲ್ಲಿರುವ, ಶಿವಾನಂದಲಹರಿಯು ಇತರ ಪ್ರಾಪಂಚಿಕ ಅನುಭವಗಳನ್ನೆಲ್ಲ ಮೀರಿ ಇರಲಿ. ||೨||

ಮೂರು ವೇದಗಳಿಂದ ತಿಳಿಯಲ್ಪಡತಕ್ಕವನಾಗಿರುವ, ರಮಣೀಯನಾಗಿರುವ, ತ್ರಿಪುರಗಳನ್ನು ದಹಿಸಿರುವ, ಜಗತ್‌ಸೃಷ್ಟಿಗಿಂತಲೂ ಆದಿಯಾಗಿರುವ, ಮುಕ್ಕಣ್ಣನಾಗಿರುವ, ಜಟಾಭಾರದಿಂದ ಗಂಭೀರನಾಗಿ ಕಾಣುತ್ತಿರುವ, ಸರ್ಪಹಾರಿಯಾಗಿರುವ ಮೃಗಧರನಾದ ಮಹಾದೇವನು ನನ್ನ ಮೇಲೆ ದಯತಾಳಿರುವನು. ಆ ಪಶುಪತಿ, ಚಿದಾಲಂಬನು, ಉಮಾಸಹಿತನು. ಲೋಕಾನುಕಂಪಿಯು. ಆ ಶಿವಸ್ವರೂಪನಾದ ಮಂಗಳಮೂರ್ತಿಯನ್ನು ಹೃದಯದಲ್ಲಿ ನಾನು ಭಜಿಸುತ್ತೇನೆ. ||೩||

ಹೇ ಶಂಭೋ, ಶಿವ, ಲೋಕದಲ್ಲಿ ಕ್ಷುದ್ರಫಲಗಳನ್ನು ಈಯುವ ದೇವತೆಗಳು ಸಹಸ್ರಾರುಮಂದಿ ಇರುವರು. ನಾನು ಕನಸಿನಲ್ಲಿಯೂ ಅವರನ್ನು ಅನುಸರಿಸಿ, ಫಲಗಳನ್ನು ಯಾಚಿಸಿಲ್ಲ. ಆದರೆ ಯಾರು ವಿಷ್ಣು ಬ್ರಹ್ಮಾದಿಗಳಿಗೂ ದುರ್ಲಭವಾಗಿರುವನೊ ಅಂತಹ ನಿನ್ನ ಪಾದಪದ್ಮಗಳ ಧ್ಯಾನವನ್ನು ಯಾವಾಗಲೂ ಪ್ರಾರ್ಥಿಸುತ್ತಿದ್ದೇನೆ. ||೪||

ಸ್ಮೃತೌ ಶಾಸ್ತ್ರೇ ವೈದ್ಯೇ ಶಕುನ ಕವಿತಾ ಗಾನಫಣಿತೌ
ಪುರಾಣೇ ಮಂತ್ರೇ ವಾ ಸ್ತುತಿ ನಟನ ಹಾಸ್ಯೇಷ್ವಚತುರಃ ।
ಕಥಂ ರಾಜ್ಞಾಂ ಪ್ರೀತಿರ್ಭವತಿ ಮಯಿಕೋಽಹಂ ಪಶುಪತೇ
ಪಶುಂ ಮಾಂ ಸರ್ವಜ್ಞ ಪ್ರಥಿತಕೃಪಯಾ ಪಾಲಯ ವಿಭೋ
॥೫॥

ಘಟೋ ವಾ ಮೃತ್ಪಿಂಡೋಽಪ್ಯಣುರಪಿ ಚ ಧೂಮೋಽಗ್ನಿರಚಲಃ
ಪಟೋ ವಾ ತಂತುರ್ವಾ ಪರಿಹರತಿ ಕಿಂ ಘೋರಶಮನಂ ।
ವೃಥಾ ಕಂಠಕ್ಷೋಭಂ ವಹಸಿ ತರಸಾ ತರ್ಕವಚಸಾ
ಪದಾಂಭೋಜಂ ಶಂಭೋರ್ಭಜ ಪರಮಸೌಖ್ಯಂ ವ್ರಜ ಸುಧೀಃ
॥೬॥

ಮನಸ್ತೇ ಪಾದಾಬ್ಜೇ ನಿವಸತು ವಚಃ ಸ್ತೋತ್ರಫಣಿತೌ
ಕರೌ ಚಾಭ್ಯರ್ಚಾಯಾಂ ಶ್ರುತಿರಪಿ ಕಥಾಕರ್ಣನವಿಧೌ ।
ತವ ಧ್ಯಾನೇ ಬುದ್ಧಿರ್ನಯನಯುಗಳಂ ಮೂರ್ತಿವಿಭವೇ
ಪರಗ್ರಂಥಾನ್ಕೈರ್ವಾ ಪರಮಶಿವ ಜಾನೇ ಪರಮತಃ ॥೭॥

ಯಥಾ ಬುದ್ಧಿಃ ಶುಕ್ತೌ ರಜತಮಿತಿ ಕಾಚಶ್ಮನಿಮಣಿ-
ರ್ಜಲೇ ಪೈಷ್ಟೇ ಕ್ಷೀರಂ ಭವತಿ ಮೃಗತೃಷ್ಣಾಸು ಸಲಿಲಂ ।
ತಥಾ ದೇವ ಭ್ರಾಂತ್ಯಾ ಭಜತಿ ಭವದನ್ಯಂ ಜಡಜನೋ
ಮಹಾದೇವೇಶಂ ತ್ವಾಂ ಮನಸಿ ಚ ನ ಮತ್ವಾ ಪಶುಪತೇ ॥೮॥

ಸ್ಮೃತಿ ಶಾಸ್ತ್ರ ವೈದ್ಯ ಶಕುನ ಕವಿತ್ವ ಗಾನ ಪುರಾಣ ಮಂತ್ರ ಸ್ತುತಿ ನಟನೆ ಹಾಸ್ಯ ಮುಂತಾದ ಯಾವುದರಲ್ಲಿಯೂ ನಾನು ಚತುರನಲ್ಲ. ಹೀಗೆ ಇರುವಾಗ ರಾಜನ ಪ್ರೀತಿ ಹೇಗೆ ನನ್ನ ಮೇಲೆ ಬರುವುದು. ಪಶುಪ್ರಾಯ ನಾದ ನನ್ನನ್ನು, ಹೇ ಪಶುಪತಿ, ಸಕಲ ನಿಗಮಾಗಮ ಪ್ರಖ್ಯಾತನೇ, ಸರ್ವ ಜ್ಞನೇ ನೀನು ದಯೆಯಿಂದ ರಕ್ಷಿಸು. ||೫||

ಹೇ ತರ್ಕಪಂಡಿತನೆ, ಮಡಿಕೆಯಾಗಲಿ ಮೃತ್ಪಿಂಡವಾಗಲಿ, ಪರ ಮಾಣುವಾಗಲಿ, ಧೂಮವಾಗಲಿ, ಅಗ್ನಿಯಾಗಲಿ, ಬೆಟ್ಟವಾಗಲಿ ಬಟ್ಟೆ ಯಾಗಲಿ, ನೂಲಾಗಲಿ (ಇವುಗಳಿಂದ ಕೂಡಿದ ಯಾವ ಶಾಸ್ತ್ರವೂ) ಯಮನ ಬಾಧೆಯಿಂದ ನಮ್ಮನ್ನು ರಕ್ಷಿಸಲಾರದು. ಇಂತಹ ತರ್ಕಶಾಸ್ತ್ರದ ವಾಕ್ಯ ಗಳಿಂದ ವೃಥಾ ಕಂಠಕ್ಷೋಭೆಯಷ್ಟೆ. ಶಂಭುವಿನ ಪದಾಂಭೋಜವನ್ನು ಭಜಿಸು. ಅದರಿಂದ ಶೀಘ್ರವಾಗಿ ಪರಮಸೌಖ್ಯವನ್ನು ಹೊಂದು. ||೬||

ಹೇ ಪರಮಶಿವ, ನನ್ನ ಮನಸ್ಸು ಯಾವಾಗಲೂ ನಿನ್ನ ಪಾದಾಬ್ಜದಲ್ಲಿ ನೆಲಸಲಿ. ಬಾಯಿ ನಿನ್ನನ್ನು ಸ್ತುತಿಸುತ್ತಿರಲಿ. ಕೈಗಳು ನಿನ್ನ ಅರ್ಚನೆಯಲ್ಲಿ ನಿರತವಾಗಿರಲಿ. ಕಿವಿಗಳು ನಿನ್ನ ಕಥೆಯನ್ನು ಕೇಳುವುದರಲ್ಲಿ ನಿರತವಾಗಿರಲಿ. ಬುದ್ಧಿ ನಿನ್ನ ಧ್ಯಾನದಲ್ಲಿ ಮಗ್ನವಾಗಿರಲಿ. ನಯನಗಳು ನಿನ್ನ ಆಕಾರದಲ್ಲಿ ನೆಲಸಲಿ. ಹೀಗೆ ನನ್ನ ಸಕಲ ಇಂದ್ರಿಯಗಳು ನಿನ್ನಲ್ಲಿ ನಿರತವಾಗಿರುವಾಗ ಇನ್ನು ಬೇರೆ ಯಾವ ಇಂದ್ರಿಯದಿಂದ ಪರಗ್ರಂಥಗಳನ್ನು (ನೀನಲ್ಲದುದನ್ನು) ಅವಲೋಕಿಸಲಿ. ||೭||

ಹೇ ಮಹಾದೇವ, ಪಶುಪತಿ, ಬುದ್ಧಿಯು ಮುತ್ತಿನಚಿಪ್ಪಿನಲ್ಲಿ ಬೆಳ್ಳಿ ಇದೆ ಎಂದು ಭಾವಿಸುವುದು. ಗಾಜಿನಲ್ಲಿ ವಜ್ರವಿದೆ ಎಂದು ತಿಳಿಯುವುದು. ಹಿಟ್ಟು ಕಲಸಿರುವ ನೀರನ್ನು ಹಾಲು ಎಂದು ಭಾವಿಸುವುದು. ಮೃಗತೃಷ್ಣೆಯನ್ನು ನೀರು ಎಂದು ಭಾವಿಸುವುದು. ಹಾಗೆಯೆ ಮೂಢಜನರು ನಿನ್ನನ್ನು ಮನಸ್ಸಿ ನಲ್ಲಿಯೂ ಭಾವಿಸದೆ ಇತರ ವಸ್ತುಗಳನ್ನು (ನೀನಲ್ಲದಿರುವುದನ್ನು) ಸತ್ಯ ವೆಂದು ಭಾವಿಸುತ್ತಿರುವರು. ||೮||

ಗಭೀರೆ ಕಾಸಾರೆ ವಿಶತಿ ವಿಜನೇ ಘೋರವಿಪಿನೆ
ವಿಶಾಲೆ ಶೈಲೆ ಚ ಭ್ರಮತಿ ಕುಸುಮಾರ್ಥಂ ಜಡಮತಿಃ ।
ಸಮರ್ಪ್ಯೈಕಂ ಚೇತಸ್ಸರಸಿಜ ಮುಮಾನಾಥ ಭವತೇ
ಸುಖೇನೈವ ಸ್ಥಾತುಂ ಜನ ಇಹ ನಜಾನಾತಿ ಕಿಮಹೊ ॥೯॥

ನರತ್ವಂ ದೇವತ್ವಂ ನಗವನಮೃಗತ್ವಂ ಮಶಕತಾ
ಪಶುತ್ವಂ ಕೀಟತ್ವಂ ಭವತು ವಿಹಗತ್ವಾದಿ ಜನನಂ ।
ಸದಾತ್ವತ್ಪಾದಾಬ್ಜಸ್ಮರಣ ಪರಮಾನಂದಲಹರೀ
ವಿಹಾರಾಸಕ್ತಂ ಚೇದೃದಯಮಿಹ ಕಿಂ ತೇನ ವಪುಷಾ ॥೧೦॥

ವಟುರ್ವಾ ಗೇಹೀ ವಾ ಯತಿರಪಿ ಜಟೀ ವಾ ತದಿತರೊ
ನರೋ ವಾ ಯಃ ಕಶ್ಚಿದ್ಭವತು ಭವ ಕಿಂ ತೇನ ಭವತಿ ।
ಯದೀಯಂ ಹೃತ್ಪದ್ಮಂ ಯದಿ ಭವದಧೀನಂ ಪಶುಪತೇ
ತದೀಯ ಸ್ತ್ವಂ ಶಂಭೋ ಭವಸಿ ಭವಭಾರಂ ಚ ವಹತಿ ॥೧೧॥

ಗುಹಾಯಾಂ ಗೇಹೇ ವಾ ಬಹಿರಪಿ ವನೇ ವಾಽದ್ರಿಶಿಖರೇ
ಜಲೆ ವಾ ವಹ್ನೌ ವಾ ವಸತು ವಸತೇಃ ಕಿಂ ವದ ಫಲಂ ।
ಸದಾ ಯಸ್ಯೈವಾಂತಃಕರಣಮಪಿ ಶಂಭೋ ತವ ಪದೇ
ಸ್ಥಿತಂ ಚೇದ್ಯೋಗೋಸೌ ಸ ಚ ಪರಮಯೋಗಿ ಸ ಚ ಸುಖೀ ॥೧೨॥

ಅಸಾರೇ ಸಂಸಾರೇ ನಿಜಭಜನದೂರೇ ಜಡಧಿಯಾ
ಭ್ರಮಂತಂ ಮಾಮಂಧಂ ಪರಮಕೃಪಯಾ ಪಾತುಮುಚಿತಂ ।
ಮದನ್ಯಃ ಕೋ ದೀನಸ್ತವ ಕೃಪಣ ರಕ್ಷಾತಿನಿಪುಣಃ
ತ್ವದನ್ಯಃ ಕೋ ವಾ ಮೇ ತ್ರಿಜಗತಿ ಶರಣ್ಯಃ ಪಶುಪತೇ ॥೧೩॥

ಹೇ ಉಮಾನಾಥ, ಜನರು ಬುದ್ಧಿಹೀನರಾಗಿ ಅಗಾಧವಾದ ಕೊಳದಲ್ಲಿ (ಕಮಲಕ್ಕಾಗಿ) ಪ್ರವೇಶಿಸುವರು. ನಿರ್ಜನವಾದ ಭಯಂಕರವಾದ ಅಡವಿಗೂ, ವಿಸ್ತಾರವಾದ ಪರ್ವತಕ್ಕೂ ಹೂವಿಗಾಗಿ ಅಲೆದಾಡುವರು. ಚೇತಸ್ಸಿನ ಸರಸ್ಸಿನಲ್ಲಿರುವ ಕಮಲವನ್ನು ನಿನಗೆ ಅರ್ಪಿಸಿ ಸುಖದಿಂದ ಇರುವುದನ್ನು ಕಲಿಯಲಿಲ್ಲ. ಇದು ಆಶ್ಚರ್ಯ! ||೯||

ನರತ್ವವಾಗಲಿ, ದೇವತ್ವವಾಗಲಿ, ಮೃಗತ್ವವಾಗಲಿ, ಸೊಳ್ಳೆಯಾಗಲಿ, ಪಶುವಾಗಲಿ, ಕೀಟವಾಗಲಿ, ಪಕ್ಷಿಯಾಗಲಿ ಯಾವ ಜನ್ಮ ಪ್ರಾಪ್ತವಾದರೇನು. ಸದಾಕಾಲದಲ್ಲಿಯೂ ನಿನ್ನ ಪದಧ್ಯಾನದಿಂದ ಜಿನುಗುವ ಆನಂದಲಹರಿಯಲ್ಲಿ ವಿಹರಿಸುತ್ತಿದ್ದರೆ ಸಾಕು. ||೧೦||

ಶಂಭೋ, ಪಶುಪತೆ, ಒಬ್ಬನು ಗೃಹಸ್ಥ ಬ್ರಹ್ಮಚಾರಿ ವಾನಪ್ರಸ್ಥ ಸನ್ಯಾಸಿಯಾದರೆ ಅದರಿಂದ ಏನು? ಯಾವನ ಹೃದಯಕಮಲ ನಿನ್ನ ಅಧೀನವಾಗುವುದೋ ಆಗ ನೀನು ಅವನವನಾಗುವೆ. ಅವನ ಭವಭಾರವನ್ನೆಲ್ಲ ನೀನು ವಹಿಸುತ್ತೀಯೆ. ||೧೧||

ಹೇ ಶಂಭು, ಒಬ್ಬನು ಗುಡಿಯಲ್ಲಿದ್ದರೇನು ಮನೆಯಲ್ಲಿದ್ದರೇನು? ಹೊರಗಿದ್ದರೇನು ಅಡವಿಯಲ್ಲಿದ್ದರೇನು? ಅದ್ರಿ ಶಿಖರದಲ್ಲಿರಲಿ, ನೀರಿನಲ್ಲಿರಲಿ, ಬೆಂಕಿಯಲ್ಲಿರಲಿ; ಅಂತಹ ವಾಸದಿಂದ ಏನು ಫಲ? ಯಾವ ಮನುಷ್ಯನ ಅಂತಃಕರಣ ಸದಾ ನಿನ್ನ ಚರಣಧ್ಯಾನದಲ್ಲಿರುವುದೊ ಅದೇ ಯೋಗ. ಅವನೇ ಪರಮ ಯೋಗಿ, ಅವನೇ ಪರಮ ಸುಖಿ. ||೧೨||

ಹೇ ಪಶುಪತೇ, ಸಾರವಿಲ್ಲದ ಈ ಸಂಸಾರದಲ್ಲಿ, ಭಜನೆಗೆ ದೂರನಾಗಿ, ಮಂದಮತಿಯಂತೆ ತಿರುಗುತ್ತಲಿರುವ ಜ್ಞಾನಶೂನ್ಯನಾದ ನನ್ನನ್ನು ರಕ್ಷಿಸುವುದು ನಿನಗೆ ಯೋಗ್ಯ. ದೀನರನ್ನು ರಕ್ಷಿಸುವುದರಲ್ಲಿ ಸಮರ್ಥನಾದವನೆ, ನಿನಗೆ ನನಗಿಂತ ಬೇರೊಬ್ಬ ದೀನನು ರಕ್ಷಿಸುವುದಕ್ಕೆ ದೊರಕಲಾರನು. ನನಗೆ ನಿನ್ನನ್ನು ಬಿಟ್ಟರೆ ಮೂರುಲೋಕದಲ್ಲಿ ರಕ್ಷಕರು ಯಾರೂ ದೊರಕಲಾರರು. ||೧೩||

ಪ್ರಭುಸ್ತ್ವಂ ದೀನಾನಾಂ ಖಲು ಪರಮಬಂಧುಃ ಪಶುಪತೇ
ಪ್ರಮುಖ್ಯೋಽಹಂ ತೇಷಾಮಪಿ ಕಿಮುತ ಬಂಧುತ್ವಮನಯೋಃ
ತ್ವಯೈವ ಕ್ಷಂತವ್ಯಾಃ ಶಿವ ಮದಪರಾಧಶ್ಚ ಸಕಲಾಃ
ಪ್ರಯತ್ನಾತ್ಕರ್ತವ್ಯಂ ಮದವನಮಿಯಂ ಬಂಧುಸರಣಿಃ ॥೧೪॥

ಉಪೇಕ್ಷಾ ನೋ ಚೇತ್ಕಿಂ ನ ಹರಸಿ ಭವಧ್ಯಾನವಿಮುಖಾಂ
ದುರಾಶಾಭೂಯಿಷ್ಠಾಂ ವಿಧಿಲಿಪಿಮಶಕ್ತೋ ಯದಿ ಭವಾನ್।
ಶಿರಸ್ತದ್ವೈಧಾತ್ರಂ ನ ನ ಖಲು ಸುವೃತ್ತಂ ಪಶುಪತೇ
ಕಥಂ ವಾ ನಿರ್ಯತ್ನಂ ಕರನಖಮುಖೇನೈವ ಲುಲಿತಂ ॥೧೫॥

ವಿರಂಚಿದೀರ್ಘಾಯುರ್ಭವತು ಭವತಾ ತತ್ಪರಶಿರ-
ಶ್ಚತುಷ್ಕಂ ಸಂರಕ್ಷ್ಯಂ ಸ ಖಲು ಭುವಿ ದೈನ್ಯಂ ಲಿಖಿತವಾನ್ ।
ವಿಚಾರಃ ಕೋವಾ ಮಾಂ ವಿಶದಕೃಪಯಾ ಪಾತಿ ಶಿವತೇ
ಕಟಾಕ್ಷವ್ಯಾಪಾರಃ ಸ್ವಯಮಪಿ ಚ ದೀನಾವನಪರಃ ॥೧೬॥

ಫಲಾದ್ವಾ ಪುಣ್ಯಾನಾಂ ಮಯಿ ಕರುಣಯಾ ವಾ ತ್ವಯಿ ವಿಭೋ
ಪ್ರಸನ್ನೇಽಪಿ ಸ್ವಾಮಿನ್ ಭವದಮಲಪಾದಾಬ್ಜಯುಗಳಂ ।
ಕಥಂ ಪಶ್ಯೇಯಂ ಮಾಂ ಸ್ಥಗಯತಿ ನಮಃ ಸಂಭ್ರಮಜುಷಾಂ
ನಿಲಿಂಪಾನಾಂ ಶ್ರೇಣಿರ್ನಿಜಕನಕಮಾಣಿಕ್ಯಮಕುಟೈಃ ॥೧೭॥

ತ್ವಮೇಕೋ ಲೋಕಾನಾಂ ಪರಮಫಲದೋ ದಿವ್ಯಪದವೀಂ
ವಹಂತಸ್ತ್ವನ್ಮೂಲಾಂ ಪುನರಪಿ ಭಜನ್ತೇ ಹರಿಮುಖಾಃ ।
ಕಿಯದ್ವಾ ದಾಕ್ಷಿಣ್ಯಂ ತವ ಶಿವ ಮದಾಶಾ ಚ ಕಿಯತೀ
ಕದಾ ವಾ ಮದ್ರಕ್ಷಾಂ ವಹಸಿ ಕರುಣಾಪೂರಿತದೃಶಾ ॥೧೮॥

ಹೇ ಪಶುಪತೇ, ನೀನು ದೀನರಿಗೆಲ್ಲ ಪರಮ ಬಂಧುವಲ್ಲವೆ? ನಾನು ಆ ದೀನರಲ್ಲೆಲ್ಲ ಅತಿದೀನನಾಗಿರುವೆ. ಇಂತಹ ನಮ್ಮ ಬಾಂಧವ್ಯದಲ್ಲಿ ವಿಚಾರಿಸತಕ್ಕದ್ದೇನಿದೆ. ನೀನು ನನ್ನ ಅಪರಾಧಗಳನ್ನೆಲ್ಲ ಕ್ಷಮಿಸಬೇಕು, ನನ್ನ ರಕ್ಷಣೆಯನ್ನು ಮಾಡಬೇಕು. ಇದು ಕೇವಲ ಬಂಧುಗಳು ಮಾಡತಕ್ಕ ಕೆಲಸವಾಗಿದೆ. ||೧೪||

ಹೇ ಪಶುಪತಿ, ಉಪೇಕ್ಷೆಮಾಡಬೇಡ. ಭವಧ್ಯಾನವಿಮುಖನಾಗಿ, ಹೀನಸಂಸ್ಕಾರಗಳುಳ್ಳಂತಹ ನನ್ನ ಹಣೆಯಬರಹವನ್ನು ಏತಕ್ಕೆ ಅಳಿಸುವುದಿಲ್ಲ. ನೀನು ಆ ಕೆಲಸವನ್ನು ಮಾಡಲಾರೆ ಎನ್ನಲಾರೆ. ನೀನು ನಿನ್ನ ಉಗುರುಗಳಿಂದಲೇ ಹಿಂದೆ ಆ ಬ್ರಹ್ಮನ ಒಂದು ತಲೆಯನ್ನು ಛೇದಿಸಲಿಲ್ಲವೆ? ||೧೫||

ಹೇ ಶಿವ, ಬ್ರಹ್ಮ ದೀರ್ಘಾಯುಷ್ಮಂತನಾಗಲಿ. ಅವನ (ಉಳಿದ) ನಾಲ್ಕು ತಲೆಗಳನ್ನು ನೀನು ರಕ್ಷಿಸು. ಅವನೇ ಅಲ್ಲವೆ ನನ್ನ ಲಲಾಟದಮೇಲೆ ದೈನ್ಯಭಾವವನ್ನು ಬರೆದುದು. ಆದುದರಿಂದಲೇ ದೀನರಕ್ಷಕನಾದ ನಿನ್ನ ಕೃಪಾಕಟಾಕ್ಷವು ನನ್ನ ಮೇಲೆ ಬೀಳುತ್ತಿದೆ. ||೧೬||

ಹೇ ವಿಭು, ಸ್ವಾಮಿನ್, ಪೂರ್ವಪುಣ್ಯಗಳ ಫಲದಿಂದ ನನ್ನ ಮೇಲೆ ನೀನು ಕೃಪೆದೋರಿ ಅನುಗ್ರಹಿಸಿರುವೆ. ಆದರೂ ನಿನ್ನ ಪರಿಶುದ್ಧವಾದ ಪಾದಾಬ್ಜಗಳ ದರ್ಶನ ನನಗೆ ದೊರೆಯದೆ ಇದೆ. ಏಕೆಂದರೆ ಸ್ವರ್ಣ ರತ್ನಮಯವಾದ ಕಿರೀಟಗಳನ್ನು ಧರಿಸಿರುವ ದೇವತೆಗಳ ಸಮೂಹ ಎಡಬಿಡದೆ ನಿನಗೆ ನಮಸ್ಕರಿಸುತ್ತಿದೆ. ಹೀಗಿರುವಾಗ ನಾನು ಯಾವಾಗ ಅದನ್ನು ನೋಡೇನು. ||೧೭||

ಹೇ ದೇವ, ನೀನೊಬ್ಬನೆ ಲೋಕಕ್ಕೆಲ್ಲ ಪರಮಫಲವನ್ನು ಕೊಡುವನಾಗಿದ್ದೀಯೆ. ವಿಷ್ಣುಮುಂತಾದವರಿಗೆ ಅವರ ಪದವಿ ಸಿಕ್ಕಿರುವುದು ನಿನ್ನ ಅನುಗ್ರಹದಿಂದ. ಅವರು ಇನ್ನೂ ನಿನ್ನನ್ನು ಭಜಿಸುತ್ತಿರುವರು. ಶಿವನೆ, ನಿನಗೆ ಅವರಮೇಲೆ ದಾಕ್ಷಿಣ್ಯ ಹೆಚ್ಚು. ನನ್ನ ಅಪೇಕ್ಷೆಯೂ ಹಿರಿದಾದುದೆ. ನೀನೆಂದು ಕೃಪಾಪೂರ್ಣದೃಷ್ಟಿಯಿಂದ ನನ್ನನ್ನು ರಕ್ಷಿಸುತ್ತೀಯೊ ಎಂದು ಕಾಯುತ್ತಿರುವೆನು. ||೧೮||

ದುರಾಶಾಭೂಯಿಷ್ಟೇ ದುರಧಿಪ ಗೃಹದ್ವಾರಘುಟಕೇ
ದುರಂತೇ ಸಂಸಾರೇ ದುರಿತನಿಲಯೇ ದುಃಖಜನಕೇ ।
ಮದಾಯಾಸಂ ಕಿಂ ನ ವ್ಯಪನಯಸಿ ಕಸ್ಯೋಪಕೃತಯೇ
ವದೇಯಂ ಪ್ರೀತಿಶ್ಚೇತ್ತವ ಶಿವ ಕೃತಾರ್ಥಾಃ ಖಲು ವಯಂ
॥೧೯॥

ಸದಾ ಮೋಹಾಟವ್ಯಾಂ ಚರತಿ ಯುವತೀನಾಂ ಕುಚಗಿರೌ
ನಟತ್ಯಾಶಾ ಶಾಖಾ ಸ್ವಟತಿ ಝಟಿತಿ ಸ್ವೈರಮಭಿತಃ ।
ಕಪಾಲಿನ್ ಭಿಕ್ಷೋಮೇ ಹೃದಯಕಪಿಮತ್ಯಂತ ಚಪಲಂ
ದೃಢಂ ಭಕ್ತ್ಯಾ ಬಧ್ವಾ ಶಿವಭವದಧೀನಂ ಕುರುವಿಭೋ ॥೨೦॥

ಧೃತಿಸ್ತಂಭಾಧಾರಾಂ ದೃಢಗುಣಂ ನಿಬದ್ಧಾಂ ಸಗಮನಾಂ
ವಿಚಿತ್ರಾಂ ಪದ್ಮಾಢ್ಯಾಂ ಪ್ರತಿದಿವಸ ಸನ್ಮಾರ್ಗಘಟಿತಾಂ ।
ಸ್ಮರಾರೆ ಮಚ್ಚೇತಸ್ಸ್ಫುಟ ಪಟಕುಟೀಂ ಪ್ರಾಪ್ಯವಿಶದಾಂ
ಜಯಾ ಸ್ವಾಮಿನ್ ಶಕ್ತ್ಯಾ ಸಹ ಶಿವ ಗಣೈಃ ಸೇವಿತ ವಿಭೋ
॥೨೧॥

ಪ್ರಲೋಭಾದ್ಯೈರರ್ಥಾಹರಣ ಪರತಂತ್ರೋ ಧನಿಗೃಹೆ
ಪ್ರವೇಶೋದ್ಯುಕ್ತಃ ಸಂಭ್ರಮತಿ ಬಹುಧಾ ತಸ್ಕರಪತೆ ।
ಇಮಂ ಚೇತಶ್ಚೋರಂ ಕಥಮಿಹ ಸಹೇ ಶಂಕರ ವಿಭೋ
ತವಾಧೀನಂ ಕೃತ್ವಾ ಮಯಿ ನಿರಪರಾಧೆ ಕುರು ಕೃಪಾಂ ॥೨೨॥

ಕರೋಮಿ ತ್ವತ್ಪೂಜಾಂ ಸಪದಿ ಸುಖದೋ ಮೇ ಭವ ವಿಭೋ
ವಿಧಿತ್ವಂ ವಿಷ್ಣುತ್ವಂ ದಿಶಸಿ ಖಲು ತಸ್ಯಾಃ ಫಲಮಿತಿ ।
ಪುನಶ್ಚ ತ್ವಾಂ ದ್ರಷ್ಟುಂ ದಿವಿ ಭುವಿ ವಹನ್ ಪಕ್ಷಿಮೃಗತಾ-
ಮದೃಷ್ಟ್ವಾ ತತ್ಖೇದಂ ಕಥಮಿಹ ಸಹೇ ಶಂಕರ ವಿಭೋ ॥೨೩॥

ಹೇ ಶಿವ, ದುರಾಶೆಯಿಂದ ತುಂಬಿರುವ ದುಷ್ಟರಾದ ಪ್ರಭುಗಳ ಮನೆ ಬಾಗಿಲಿನಲ್ಲಿ ಕಾಯುವಂತಹ, ದುರಂತವಾದ, ಪಾಪಕ್ಕೆ ಮೂಲವಾದ, ದುಃಖ ವನ್ನುಂಟುಮಾಡುವ, ಸಂಸಾರದಲ್ಲಿ ನಾನು ಪಡುತ್ತಿರುವ ಶ್ರಮವನ್ನು ಏತಕ್ಕೆ ಹೋಗಲಾಡಿಸುವುದಿಲ್ಲ. ಇದು ಯಾರ ಉಪಕಾರಕ್ಕಾಗಿ ಹೇಳು. ಇದು ನಿನ್ನ ಪ್ರೇಮಕ್ಕೆ ಗುರುತಾದರೆ ನಾವು ಕೃತಕೃತ್ಯರಾದಂತೆಯೆ ಸರಿ. ||೧೯||

ಹೇ, ಕಪಾಲಧಾರಿ ಭಿಕ್ಷುಕನೆ, ವಿಭು, ನನ್ನ ಮನಸ್ಸೆಂಬ ಕಪಿ ಯಾವಾಗಲೂ ಮೋಹಾಟವಿಯಲ್ಲಿ ಸಂಚರಿಸುತ್ತಿದೆ. ಯುವತಿಯರ ಕುಚ ಗಿರಿಯಲ್ಲಿ ಆಡುತ್ತಿದೆ ಆಶಾಶಾಖೆಯ ಮೇಲೆ ಮನಬಂದಂತೆ ಸುತ್ತಲೂ ತಿರುಗುತ್ತಿದೆ. ಅತ್ಯಂತ ಚಪಲವಾದ ನನ್ನ ಹೃದಯ ಕಪಿಯನ್ನು ಭಕ್ತಿಯೆಂಬ ಹಗ್ಗದಿಂದ ಬಿಗಿಯಾಗಿ ಕಟ್ಟಿ ನಿನ್ನ ವಶಮಾಡಿಕೊ. ||೨೦||

ಹೇ ಮನ್ಮಥನನ್ನು ಜಯಿಸಿದವನೆ, ಸ್ವಾಮಿನ್, ಶಿವ, ಪ್ರಮಥಗಣ ಗಳಿಂದ ಸೇವಿಸಲ್ಪಟ್ಟವನೆ, ಧೈರ್ಯವೆಂಬ ಸ್ತಂಭಗಳನ್ನು ಆಧಾರವಾಗಿ ಉಳ್ಳಂಥ, ದೃಢವಾದ ಹಗ್ಗಗಳಿಂದ ಕಟ್ಟಿರುವ, ವಿಚಿತ್ರವಾದ ಚಿತ್ರಗಳಿಂದ ಕೂಡಿರುವ, ರಾಜಮಾರ್ಗದ ಹತ್ತಿರ ಇರುವ ನನ್ನ ಮನಸ್ಸೆಂಬ ಡೇರೆಯಲ್ಲಿ ನೀನು ಶಕ್ತಿಸಹಿತ ನೆಲೆಸು. ||೨೧||

ಹೇ ಶಂಕರ, ಕಳ್ಳರಿಗೆ ಒಡೆಯನಾದವನೆ, ವಿಭುವೆ, ನನ್ನ ಮನಸ್ಸೆಂಬ ಕಳ್ಳನು ಆಸೆಯನ್ನು ಹುಟ್ಟಿಸುತ್ತಿದೆ. ಧನವನ್ನು ಸಂಪಾದಿಸುವುದರಲ್ಲಿ ನಿರತ ವಾಗಿ ಧನವಂತರ ಮನೆಯನ್ನು ಪ್ರವೇಶಿಸುವುದರಲ್ಲಿ ಉದ್ಯುಕ್ತವಾಗಿ ಸುಮ್ಮನೆ ತಿರುಗುತ್ತಲಿದೆ. ಇದನ್ನು ಸಹಿಸುವುದು ಹೇಗೆ. ಇದನ್ನು ನಿನ್ನ ಅಧೀನಮಾಡಿ ನಾನು ನಿರಪರಾಧಿಯಾಗುವೆನು. ನನ್ನ ಮೇಲೆ ಕೃಪೆ ದೋರು. ||೨೨||

ಹೇ ವಿಭೋ ಶಂಕರ, ನಾನು ನಿನ್ನ ಪೂಜೆಯನ್ನು ಮಾಡುತ್ತೇನೆ. ತಕ್ಷಣವೆ ನೀನು ಅದಕ್ಕೆ ವಿಷ್ಣುತ್ವವನ್ನಾಗಲಿ, ಬ್ರಹ್ಮತ್ವವನ್ನಾಗಲಿ ಫಲದಂತೆ ಕೊಡುವೆ. ಆದರೆ ಅವುಗಳನ್ನು ಪಡೆದರೂ. ನಿನ್ನನ್ನು ನೋಡದೆ ಇರುವ ವ್ಯಥೆಯನ್ನು ಹೇಗೆ ಸಹಿಸುವುದು. ||೨೩||

ಕದಾ ವಾ ಕೈಲಾಸೇ ಕನಕಮಣಿಸೌಧೇ ಸಹಗಣೈ-
ರ್ವಸನ್ ಶಂಭೋರಗ್ರೇ ಸ್ಫುಟಘಟಿತಮೂರ್ಧಾಂಜಲಿಪುಟಃ ।
ವಿಭೋ ಸಾಂಬ ಸ್ವಾಮಿನ್ ಪರಮಶಿವ ಪಾಹೀತಿ ನಿಗದನ್
ವಿಧಾತೄಣಾಂ ಕಲ್ಪಾನ್ ಕ್ಷಣಮಿವ ವಿನೇಷ್ಯಾಮಿ ಸುಖತಃ
॥೨೪॥

ಸ್ತವೈರ್ಬ್ರಹ್ಮಾದೀನಾಂ ಜಯಜಯವಚೋಭಿರ್ನಿಯಮಿನಾಂ
ಗಣಾನಾಂ ಕೇಳೀಭಿರ್ಮದಕಲಮಹೋಕ್ಷಸ್ಯ ಕಕುದಿ ।
ಸ್ಥಿತಂ ನೀಲಗ್ರೀವಂ ತ್ರಿನಯನಮುಮಾಶ್ಲಿಷ್ಟವಪುಷಂ
ಕದಾ ತ್ವಾಂ ಪಶ್ಯೇಯಂ ಕರಧೃತಮೃಗಂ ಖಂಡಪರಶುಂ॥೨೫॥

ಕದಾ ವಾ ತ್ವಾಂ ದೃಷ್ಟ್ವಾ ಗಿರಿಶ ತವ ಭವ್ಯಾಂಘ್ರಿಯುಗಳಂ
ಗೃಹೀತ್ವಾ ಹಸ್ತಾಭ್ಯಾಂ ಶಿರಸಿ ನಯನೇ ವಕ್ಷಸಿ ವಹನ್ ।
ಸಮಾಶ್ಲಿಷ್ಯಾಘ್ರಾಯ ಸ್ಫುಟಜಲಜಗಂಧಾನ್ ಪರಿಮಳಾ
ನಲಭ್ಯಾಂ ಬ್ರಹ್ಮಾದ್ಯೈರ್ಮುದಮನುಭವಿಷ್ಯಾಮಿ ಹೃದಯೆ
॥೨೬॥

ಕರಸ್ಥೇ ಹೇಮಾದ್ರೌ ಗಿರಿಶ ನಿಕಟಸ್ಥೇ ಧನಪತೌ
ಗೃಹಸ್ಥೇ ಸ್ವರ್ಭೂಜಾ ಅಮರಸುರಭಿ ಚಿಂತಾಮಣಿಗಣೇ ।
ಶಿರಸ್ಥೇ ಶೀತಾಂಶೌ ಚರಣಯುಗಳಸ್ಥೇ ಅಖಿಲಶುಭೇ
ಕಮರ್ಥಂ ದಾಸ್ಯೇ ಹಂ ಭವತು ಭವದರ್ಥಂ ಮಮ ಮನಃ
॥೨೭॥

ಶಂಭುವಿನ ಸಮ್ಮುಖದಲ್ಲಿ ನಾನು ಕೈಲಾಸಪರ್ವತದಲ್ಲಿ ಕನಕಮಣಿಮಯವಾದ ಮಂದಿರದಲ್ಲಿ ಪ್ರಮಥಗಣಗಳೊಂದಿಗೆ ವಾಸಮಾಡುತ್ತ ನಿನ್ನ ಪಾದಗಳ ಮೇಲೆ ನನ್ನ ಶಿರವನ್ನು ಇಟ್ಟು, ವಿಭೋ, ಸಾಂಬ, ಸ್ವಾಮಿನ್, ಪರಮಶಿವ, ಪಾಹಿ ಎಂದು ಹೇಳುತ್ತ ಕಲ್ಪಾಂತರಗಳನ್ನು ಕ್ಷಣದಂತೆ ಕಳೆದೇನು ? ||೨೪||

ಬ್ರಹ್ಮಾದಿಗಳು ಸ್ತೋತ್ರಗಳಿಂದಲೂ, ಯೋಗಿಗಳು ಜಯಜಯಾಕಾರದಿಂದಲೂ, ಪ್ರಮಥಗಣಗಳ ಕಳಕಳನಿನಾದದಿಂದಲೂ ಕೂಡಿ, ಸಂತೋಷದಿಂದ ಗಂಭೀರಧ್ವನಿಯುಳ್ಳ ನಂದಿಯ ಬೆನ್ನಿನ ಮೇಲೆ ಕುಳಿತಿರುವ, ನೀಲಗ್ರೀವನಾದ ತ್ರಿನಯನನ್ನು, ಪಾರ್ವತಿಸಹಿತನಾಗಿರುವ ಶಿವನನ್ನು, ಮೃಗಧರನಾದ ಖಂಡಪರಶುವಾದ ನಿನ್ನನ್ನು, ಯಾವಾಗ ನೋಡುವೆನೊ ಎಂದು ಕಾತರಿಸುತ್ತಿರುವೆನು. ||೨೫||

ಹೇ ಗಿರೀಶ, ನಿನ್ನನ್ನು ಸಾಕ್ಷಾತ್ಕರಿಸಿಕೊಂಡು ನಿನ್ನ ಪವಿತ್ರ ಚರಣಯುಗಗಳನ್ನು ಕೈಗಳಲ್ಲಿ ಹಿಡಿದುಕೊಂಡು, ಅದನ್ನು ಶಿರಸ್ಸು ನಯನ ಹೃದಯದಲ್ಲಿ ಧರಿಸಿಕೊಂಡು, ಆಲಿಂಗನಮಾಡಿಕೊಂಡು, ವಿಕಸಿತವಾದ ಕಮಲಗಳಲ್ಲಿರುವ ಪರಿಮಳವನ್ನು ಆಘ್ರಾಣಿಸುವಂತೆ ನಿನ್ನ ಪದಕಮಲವನ್ನು ಮೂಸಿನೋಡಿ ಬ್ರಹ್ಮಾದಿದೇವತೆಗಳಿಗೂ ಅಸಾಧ್ಯವಾದ ಸಂತೋಷವನ್ನು ಎಂದು ನಾನು ಹೃದಯದಲ್ಲಿ ಅನುಭವಿಸುವೆನು. ||೨೬||

ಹೇ ಕೈಲಾಸವಾಸೀ, ಮಹಾಮೇರುಪರ್ವತ ನಿನ್ನ ಕೈಯ್ಯಲ್ಲಿದೆ. ಕುಬೇರ ನಿನ್ನ ಸಮೀಪದಲ್ಲೆ ಇರುವನು. ಕಲ್ಪವೃಕ್ಷ ಕಾಮಧೇನು ಚಿಂತಾಮಣಿ ನಿನ್ನ ಮನೆಯಲ್ಲಿ ಬಿದ್ದಿವೆ. ಚಂದ್ರ ನಿನ್ನ ಶಿರದಲ್ಲಿ ನೆಲೆಸಿರುವನು. ಅಖಿಲ ಶುಭಗಳು ನಿನ್ನ ಪಾದದೆಡೆ ಬಿದ್ದಿವೆ. ಹೀಗಿರುವಾಗ ನಾನು ಏನನ್ನು ನಿನಗೆ ಕೊಡಬಲ್ಲೆ. ಆಗಲಿ ಚಿಂತೆ
ಅರ್ಪಿಸುವೆನು. ||೨೭||

ಸಾರೂಪ್ಯಂ ತವ ಪೂಜನೇ ಶಿವ ಮಹಾದೇವೇತಿ ಸಂಕೀರ್ತನೆ
ಸಾಮೀಪ್ಯಂ ಶಿವಭಕ್ತಿ ದುರ್ಯಜನತಾಸಾಂಗತ್ಯ ಸಂಭಾಷಣೆ ।
ಸಾಲೋಕ್ಯಂ ಚ ಚರಾಚರಾತ್ಮಕ ತನುಧ್ಯಾನೇ ಭವಾನೀಪತೆ
ಸಾಯುಜ್ಯಂ ಮಮ ಸಿದ್ಧಮತ್ರ ಭವತಿ ಸ್ವಾಮಿನ್
ಕೃತಾರ್ಥೋಽಸ್ಮ್ಯಹಂ ॥೨೮॥

ತ್ವತ್ಪಾದಾಂಬುಜ ಮರ್ಚಯಾಮಿ ಪರಮಂ ತ್ವಾಂ ಚಿಂತ-
ಯಾಮ್ಯನ್ವಹಂ
ತ್ವಮೀಶಂ ಶರಣಂ ವ್ರಜಾಮಿ ವಚಸಾ ತ್ವಾಮೇವ ಯಾಚೇ
ವಿಭೋ ।
ವೀಕ್ಷಾಂ ಮೇ ದಿಶ ಚಕ್ಷುಷೀಂ ಸಕರುಣಾಂ ದಿವ್ಯೈಶ್ಚಿರಂ
ಪ್ರಾರ್ಥಿತಾಂ
ಶಂಭೋ ಲೋಕಗುರೋ ಮದೀಯಮನಸಃ ಸೌಖ್ಯೋಪ-
ದೇಶಂ ಕುರು ॥೨೯॥

ವಸ್ತ್ರೋದ್ಧೂತವಿಧೌ ಸಹಸ್ರಕರತಾ ಪುಷ್ಪಾರ್ಚನೇ ವಿಷ್ಣುತಾ
ಗಂಧೇ ಗಂಧವಹಾತ್ಮತಾನ್ನ ಪಚನೇ ಬರ್ಹಿರ್ಮುಖಾಧ್ಯಕ್ಷತಾ।
ಪಾತ್ರೇ ಕಾಂಚನಗರ್ಭತಾಸ್ತಿ ಮಯಿ ಚೇದ್ಬಾಲೇಂದು
ಚೂಡಾಮಣೇ
ಶುಶ್ರೂಷಾಂ ಕರವಾಣಿ ತೇ ಪಶುಪತೇ ಸ್ವಾಮಿನ್ ತ್ರಿಲೋಕೀ
ಗುರೋ ॥೩೦॥

ನಾಲಂ ವಾ ಪರಮೋಪಕಾರಕಮಿದಂತ್ವೇಕಂ ಪಶೂನಾಂ ಪತೇ
ಪಶ್ಯನ್ ಕುಕ್ಷಿಗತಾನ್ ಚರಾಚರಗಣಾನ್ ಬಾಹ್ಯಸ್ಥಿತಾನ್
ರಕ್ಷಿತುಮ್ ।
ಸರ್ವಾಮರ್ತ್ಯ ಪಲಾಯನೌಷಧಮತಿಜ್ವಾಲಾಕರಂ ಭೀಕರಂ
ನಿಕ್ಷಿಪ್ತಂ ಗರಳಂ ಗಳೇ ನ ಗಿಳಿತಂ ನೋದ್ಗೀರ್ಣಮೇವ ತ್ವಯಾ
॥೩೧॥

ಹೇ ಶಿವ, ನಿನ್ನ ಪೂಜೆಯಿಂದ ಸಾರೂಪ್ಯಮುಕ್ತಿ. ಶಿವಮಹಾದೇವ ಎಂದು ನುತಿಸುವುದರಿಂದ ಸಾಮೀಪ್ಯಮುಕ್ತಿ. ಶಿವಭಕ್ತಿಶ್ರೇಷ್ಠರೊಡನೆ ಸಹವಾಸ ಸಂಭಾಷಣೆಯಿಂದ ಸಾಲೋಕ್ಯಮುಕ್ತಿ. ಚರಾಚರಾತ್ಮಕನಾದ ನಿನ್ನ ವಿರಾಟ್‌ಸ್ವರೂಪ ಧ್ಯಾನದಿಂದ ಸಾಯುಜ್ಯಮುಕ್ತಿ ನನಗೆ ಸಿದ್ಧಿಸುತ್ತದೆ. ಹೇ ಸ್ವಾಮಿನ್, ನಾನು ಈ ಲೋಕದಲ್ಲಿ ಕೃತಾರ್ಥನಾಗುತ್ತಿರುವೆನು. ||೨೮||

ಹೇ ಶಂಭು ಲೋಕಗುರು, ನಾನು ನಿನ್ನ ಪಾದಕಮಲಗಳನ್ನು ಅರ್ಚಿಸುತ್ತಲಿರುವೆನು. ಪ್ರತಿದಿನ ಶ್ರೇಷ್ಠನಾದ ನಿನ್ನನ್ನು ಚಿಂತಿಸುತ್ತಿರುವೆನು. ಸರ್ವೇಶ್ವರನಾದ ನಿನ್ನಲ್ಲಿ ಶರಣಾಗಿರುವೆನು. ಹೇ ವಿಭೋ, ಮಾತಿನಿಂದ ನಿನ್ನನ್ನೇ ಪ್ರಾರ್ಥಿಸುತ್ತಲಿರುವೆನು. ಬಹಳಕಾಲ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಸಕರುಣಾನಯನವನ್ನು ನನ್ನ ಮೇಲೆ ಬೀರು. ನನ್ನ ಮನಸ್ಸಿಗೆ ಆನಂದವನ್ನು ಉಂಟುಮಾಡು. ||೨೯||

ಹೇ ಬಾಲೇಂದುಚೂಡಾಮಣಿ, ಪಶುಪತಿ, ಸ್ವಾಮಿನ್, ತ್ರಿಲೋಕಗುರು, ನಿನಗೆ ವಸ್ತ್ರಸಮರ್ಪಣೆ ಮಾಡಬೇಕಾದರೆ ಸೂರ್ಯನಾಗಬೇಕು. ಪುಷ್ಪಸಮರ್ಪಣೆ ಮಾಡಬೇಕಾದರೆ ವಿಷ್ಣುವಾಗಬೇಕು. ಗಂಧಸಮರ್ಪಣೆ ಮಾಡಬೇಕಾದರೆ ವಾಯುವಾಗಬೇಕು. ನೈವೇದ್ಯ ಸಮರ್ಪಣೆ ಮಾಡಬೇಕಾದರೆ ಇಂದ್ರನಾಗಬೇಕು. ನಿನಗೆ ಪಾತ್ರೆಯನ್ನು ಕೊಡಬೇಕಾದರೆ ಬ್ರಹ್ಮನಾಗಬೇಕು. ಇವೆಲ್ಲ ನಾನಾದರೆ ನಿನಗೆ ಶುಶ್ರೂಷೆಯನ್ನು ಮಾಡಲು ಸಾಧ್ಯ. ||೩೦||

ಹೇ ಪಶುಪತೆ, ನಿನ್ನ ಒಳಗೆ ಮತ್ತು ಹೊರಗೆ ಇರುವ ಚರಾಚರ ವಸ್ತುಗಳನ್ನು ರಕ್ಷಿಸುವುದಕ್ಕಾಗಿ, ದೇವಾಸುರರು ಯಾವ ವಿಷಕ್ಕೆ ಅಂಜಿ ಓಡಿಹೋಗುತ್ತಿದ್ದರೊ ಅದನ್ನು ನೀನು ಸ್ವೀಕರಿಸಿದೆ. ಅದನ್ನು ನುಂಗಲೂ ಇಲ್ಲ, ಹೊರಗೆ ಕಕ್ಕಲೂ ಇಲ್ಲ. ಕಂಠದ ಮಧ್ಯದಲ್ಲೇ ನಿಂತಿತು. ಈ ಕ್ರಿಯೆಯೊಂದೇ ಸಾಲದೆ ನಿನ್ನ ಮಹೋಪಕಾರಕ್ಕೆ. ||೩೧||

ಜ್ವಾಲೋಗ್ರಃ ಸಕಲಾಮರಾತಿಭಯದಃ ಕ್ಷ್ವೇಳಃ ಕಥಂ ವಾ
ತ್ವಯಾ
ದೃಷ್ಟಃ ಕಿಂ ಚ ಕರೇ ಧೃತಃ ಕರತಲೇ ಕಿಂ ಪಕ್ವಜಂಬೂಫಲಮ್ ।
ಜಿಹ್ವಾಯಾಂ ನಿಹಿತಶ್ಚ ಸಿದ್ಧಘುಟಿಕಾ ವಾ ಕಂಠದೇಶೇ ಭೃತಃ
ಕಿಂ ತೇ ನೀಲಮಣಿರ್ವಿಭೂಷಣಮಯಂ ಶಂಭೋ ಮಹಾತ್ಮ-
ನ್ವದ ॥೩೨॥

ನಾಲಂ ವಾ ಸಕೃದೇವ ದೇವ ಭವತಸ್ಸೇವಾ ನತಿರ್ವಾ ನುತಿಃ
ಪೂಜಾ ವಾ ಸ್ಮರಣಂ ಕಥಾಶ್ರವಣಮಪ್ಯಾಲೋಕನಂ
ಮಾದೃಶಾಂ ।
ಸ್ವಾಮಿನ್ನಸ್ಥಿರದೇವತಾನುಸರಣಾಯಾಸೇನ ಕಿಂ ಲಭ್ಯತೇ
ಕಾ ವಾ ಮುಕ್ತಿರಿತಃ ಕುತೋ ಭವತಿ ಚೇತ್ಕಿಂ ಪ್ರಾರ್ಥನೀಯಂ
ಸದಾ ॥೩೩॥

ಕಿಂ ಬ್ರೂಮಸ್ತವ ಸಾಹಸಂ ಪಶುಪತೇ ಕಸ್ಯಾಸ್ತಿ ಶಂಭೋ
ಭವದ್ಧೈರ್ಯಂ ಚೇದೃಶಮಾತ್ಮನಃ ಸ್ಥಿತಿರಿಯಂ ಚಾನ್ಯೈಃ
ಕಥಂ ಲಭ್ಯತೇ ।
ಭ್ರಶ್ಯದ್ದೇವಗಣಂ ತ್ರಸನ್ಮುನಿಗಣಂ ನಶ್ಯತ್ಪ್ರಪಂಚಂ ಲಯಂ
ಪಶ್ಯನ್ನಿರ್ಭಯ ಏಕ ಏವ ವಿಹರತ್ಯಾನಂದಸಾಂದ್ರೋ
ಭವಾನ್ ॥೩೪॥

ಯೋಗಕ್ಷೇಮಧುರಂಧರಸ್ಯ ಸಕಲಶ್ರೇಯಃ ಪ್ರದೋ
ದ್ಯೋಗಿನೋ
ದೃಷ್ಟಾದೃಷ್ಟಮತೋಪದೇಶಕೃತಿನೋ ಬಾಹ್ಯಾಂತರ
ವ್ಯಾಪಿನಃ ।
ಸರ್ವಜ್ಞಸ್ಯ ದಯಾಕರಸ್ಯ ಭವತಃ ಕಿಂ ವೇದಿತವ್ಯಂ ಮಯಾ
ಶಂಭೋ ತ್ವಂ ಪರಮಾಂತರಂಗ ಇತಿ ಮೇ ಚಿತ್ತೇಸ್ಮರಾಮ್ಯ-
ನ್ವಹಂ ॥೩೫॥

ಹೇ ಶಂಭು, ಮಹಾತ್ಮನ್, ಜ್ವಾಲೆಗಳನ್ನು ಕಾರುತ್ತಿರುವ, ದೇವತೆಗಳಿಗೆ ಭಯಂಕರವಾಗಿರುವ ಆ ವಿಷವನ್ನು ನೀನು ಹೇಗೆ ನೋಡಿದೆ? ಅದನ್ನು ಏನೆಂದು ಕೈಯಲ್ಲಿ ಧರಿಸಿದೆ? ಪಕ್ವ ಜಂಬೂಫಲವೆಂದು ಕೈಯಲ್ಲಿ ತೆಗೆದುಕೊಂಡೆಯೊ? ಸಿದ್ಧರ ಗುಳಿಗೆಯೆಂದು ನಾಲಿಗೆಯ ಮೇಲೆ ಇಟ್ಟುಕೊಂಡೆಯೊ? ಸುಂದರವಾದ ನೀಲಮಣಿ ಎಂದು ನಿನ್ನ ಕೊರಳಿನಲ್ಲಿ ಧರಿಸಿದೆಯೊ? ಇದನ್ನು ಹೇಳು. ||೩೨||

ಹೇ ಸ್ವಾಮಿನ್, ದೇವ, ನಮ್ಮಂಥವರಿಗೆ ನಿನ್ನ ಸೇವೆ, ನಿನಗೆ ಮಾಡುವ ನಮಸ್ಕಾರ, ಸ್ತೋತ್ರ, ಪೂಜೆ, ಧ್ಯಾನ, ನಿನ್ನ ಕಥಾಶ್ರವಣ, ನಿನ್ನ ದರ್ಶನ ಒಮ್ಮೆ ಮಾಡಿದರೂ ಸಾಲದೆ? ಅನನ್ಯವಾದ ಇತರ ದೇವತೆಗಳನ್ನು ಅನುಸರಿಸಿ ಪ್ರಯೋಜನವೇನು? ಅದರಿಂದ ಲಭಿಸುವುದೇನು? ಇದಕ್ಕಿಂತ ಮುಕ್ತಿ ಎಂಬುದು ಯಾವುದಾದೀತು? ಅದು ಲಭಿಸುವುದಾದರೆ ಹೇಗೆ ಲಭಿಸುತ್ತದೆ? ಆಗ ಪ್ರಾರ್ಥಿಸುವುದು ಏನನ್ನು? ||೩೩||

ಹೇ ಪಶುಪತೇ, ಶಂಭೋ, ನಿನ್ನ ಸಾಹಸ ಮತ್ತಾರಿಗೆ ಇದೆ. ಇಂತಹ ಧೈರ್ಯ ಯಾರಿಗೆ ಇದೆ. ಇಂತಹ ಸ್ಥಿತಿ ಅನ್ಯರಿಗೆ ಹೇಗೆ ಲಭಿಸುತ್ತದೆ. ಮಹಾಪ್ರಳಯದಲ್ಲಿ ದೇವಗಣ ಜಾರಿಹೋಗುತ್ತಿರುವಾಗ, ಮುನಿಗಣ ಅಂಜುತ್ತಿರುವಾಗ, ನೀನೊಬ್ಬನೆ ನಿರ್ಭಯನಾಗಿ ಆನಂದದಿಂದ ವಿಹರಿಸುತ್ತಿರುವೆ. ||೩೪||

ಹೇ ಶಂಭೋ, ನನ್ನ ಯೋಗಕ್ಷೇಮಗಳ ವಿಷಯದಲ್ಲಿ ನೀನು ಸದಾ ಜಾಗ್ರತನಾಗಿರುವೆ. ಸರ್ವಶ್ರೇಯಸ್ಸುಗಳನ್ನು ನೀಡುವುದರಲ್ಲಿ ನಿರತನಾಗಿರುವೆ. ಐಹಿಕ ಆಮುಷ್ಮಿಕ ಫಲೋಪಾಯಗಳನ್ನು ತಿಳಿಸುವುದರಲ್ಲಿ ಸಮರ್ಥನಾಗಿರುವೆ. ಒಳಗೆ ಹೊರಗೆಲ್ಲ ವ್ಯಾಪಿಸಿರುವೆ. ದಯಾನಿಧಿ ನೀನು, ಸರ್ವಜ್ಞ ನೀನು. ಹೀಗಿರುವಾಗ ನಾನು ನಿನಗೆ ತಿಳಿಸುವುದು ಏನಿರುವುದು. ನೀನೇ ನನ್ನ ಪರಮ ಅಂತರಂಗ ಎಂದು ಮನಸ್ಸಿನಲ್ಲಿ ಸ್ಮರಿಸುತ್ತಿರುವೆನು. ||೩೫||

ಭಕ್ತೋ ಭಕ್ತಿಗುಣಾವೃತೇ ಮುದಮೃತಾಪೂರ್ಣೇ ಪ್ರಸನ್ನೇ
ಮನಃ
ಕುಂಭೇ ಸಾಂಬ ತವಾಂಘ್ರಿಪಲ್ಲವ ಯುಗಂ ಸಂಸ್ಥಾಪ್ಯ
ಸಂವಿತ್ಫಲಂ ।
ಸತ್ತ್ವಂ ಮಂತ್ರಮುದೀರಯನ್ ನಿಜಶರೀರಾಗಾರಶುದ್ಧಿಂ
ವಹನ್
ಪುಣ್ಯಾಹಂ ಪ್ರಕಟೀಕರೋಮಿ ರುಚಿರಂ ಕಲ್ಯಾಣಮಾಪಾ-
ದಯನ್ ॥೩೬॥

ಆಮ್ನಾಯಾಂಬುಧಿಮಾದರೇಣ ಸುಮನಸ್ಸಂಘಾಸ್ಸಮುಪ್ಯ
ನ್ಮನೋ
ಮಂಥಾನಂ ದೃಢಭಕ್ತಿರಜ್ಜುಸಹಿತಂ ಕೃತ್ವಾ ಮಥಿತ್ವಾತತಃ ।
ಸೋಮಂ ಕಲ್ಪತರುಂ ಸುಪರ್ವಸುರಭಿಂ ಚಿಂತಾಮಣಿಂ
ಧೀಮತಾಂ
ನಿತ್ಯಾನಂದಸುಧಾಂ ನಿರಂತರರಮಾಸೌಭಾಗ್ಯಮಾತನ್ವತೇ॥೩೭॥

ಪ್ರಾಕ್ಪುಣ್ಯಾಚಲಮಾರ್ಗದರ್ಶಿತಸುಧಾಮೂರ್ತಿಃ ಪ್ರಸನ್ನಃ
ಶಿವಃ
ಸೋಮಃ ಸದ್ಗುಣಸೇವಿತೋ ಮೃಗಧರಃ ಪೂರ್ಣಸ್ತಮೋ
ಮೋಚಕಃ ।
ಚೇತಃ ಪುಷ್ಕರಲಕ್ಷಿತೋ ಭವತಿ ಚೇದಾನಂದಪಾಥೋನಿಧಿಃ
ಪ್ರಾಗಲ್ಭ್ಯೇನ ವಿಜೃಂಭತೇ ಸುಮನಸಾಂ ವೃತ್ತಿಸ್ತದಾ
ಜಾಯತೇ ॥೩೮॥

ಧರ್ಮೋ ಮೇ ಚತುರಂಘ್ರಿಕಃ ಸುಚರಿತಃ ಪಾಪಂ ವಿನಾಶಂ
ಗತಂ
ಕಾಮಕ್ರೋಧಮದಾದಯೋ ವಿಗಳಿತಾಃ ಕಾಲಾಃ
ಸುಖಾವಿಷ್ಕೃತಃ ।
ಜ್ಞಾನಾನಂದಮಹೌಷಧಿಃ ಸುಫಲಿತಾ ಕೈವಲ್ಯನಾಥೇ ಸದಾ
ಮಾನ್ಯೇ ಮಾನಸಪುಂಡರೀಕನಗರೇ ರಾಜಾವತಂಸೇ ಸ್ಥಿತೇ
॥೩೯॥

ಹೇ ಸಾಂಬ, ಭಕ್ತನಾದ ನಾನು ಭಕ್ತಿಯೆಂಬ ತಂತುವಿನಿಂದ ಸುತ್ತಲ್ಪಟ್ಟ, ಸಂತೋಷವೆಂಬ ನೀರಿನಿಂದ ತುಂಬಿದ ನಿರ್ಮಲವಾದ ಮನಸ್ಸೆಂಬ ಪಾತ್ರೆಯ ಮೇಲೆ ನಿನ್ನ ಪಾದಕಮಲಗಳೆಂಬ ತಳಿರನ್ನು ಇಟ್ಟು, ಅಲ್ಲಿ ಜ್ಞಾನವೆಂಬ ತೆಂಗಿನಕಾಯನ್ನು ಇರಿಸಿ, ತಾರಕಮಂತ್ರವನ್ನು ಉಚ್ಚರಿಸುತ್ತ ನನ್ನ ಶರೀರ ವೆಂಬ ಮನೆಯನ್ನು ಶುದ್ಧಿಮಾಡುವುದಕ್ಕೆ, ಮತ್ತು ಮನಸ್ಸಿಗೆ ಶುಭವನ್ನು ಉಂಟುಮಾಡುವುದಕ್ಕಾಗಿಯೂ ಪುಣ್ಯಾಹಕರ್ಮವನ್ನು ಆಚರಿಸುತ್ತೇನೆ. ||೩೬||

ಶುದ್ಧಮಾನಸರು ಶ್ರದ್ಧೆಯಿಂದ ದೃಢಭಕ್ತಿಯೆಂಬ ಹಗ್ಗವನ್ನು ಮನಸ್ಸಿಗೆ ಬಿಗಿದು ಅದನ್ನು ಒಂದು ಕಡಗೋಲನ್ನಾಗಿ ಮಾಡಿ ವೇದವೆಂಬ ಸಮುದ್ರವನ್ನು ಕಡೆಯುವರು. ಅದರಿಂದ ಕಲ್ಪತರು ಕಾಮಧೇನು, ಚಿಂತಾಮಣಿ ಸಮನಾಗಿಯೂ, ನಿತ್ಯಾನಂದಸುಧೆಯಂತೆ ಮೋಕ್ಷಲಕ್ಷ್ಮಿಯಂತೆ ಇರುವ ಉಮಾಸಹಿತನಾಗಿರುವ ನಿನ್ನನ್ನು ಪಡೆಯುವರು. ||೩೭||

ಪೂರ್ವಜನ್ಮಸಂಚಿತವಾದ ಪುಣ್ಯವೆಂಬ ಪರ್ವತದ ಮಾರ್ಗದಮೂಲಕ ತೋರಿದ ಸುಧಾಮೂರ್ತಿ ನಿರ್ಮಲನಾಗಿರುವನು. ಸದ್ಗುಣದಿಂದ ಸೇವಿತನಾಗಿರುವನು. ಮೃಗಧರನಾಗಿರುವನು. ಪೂರ್ಣನಾದ ತಮೋಮೋಚಕನಾದ ಉಮಾಸಹಿತನಾದ ಮಹೇಶ್ವರನು ನನ್ನ ಮನಸ್ಸೆಂಬ ಆಕಾಶದಲ್ಲಿ ಹೊಳೆಯುತ್ತಿರುವನು. ಆಗ ಆನಂದಸಮುದ್ರ ಗಾಂಭೀರ್ಯದಿಂದ ಉಬ್ಬುವುದು. ಆಗ ಸದ್ವಾಸನಾವೃತ್ತಿಯೂ ಮನದಲ್ಲಿ ಏಳುತ್ತದೆ. ||೩೮||

ಕೈವಲ್ಯನಾಥನಾದ ಪೂಜ್ಯನಾದ ಚಂದ್ರಕಲಾಧಾರಿಯಾದ ಪರಮೇಶ್ವರನು ನನ್ನ ಹೃದಯಕಮಲವೆಂಬ ಪಟ್ಟಣದಲ್ಲಿ ಯಾವಾಗಲೂ ನೆಲೆಗೊಂಡಿದ್ದರೆ ಧರ್ಮವು ಸರಿಯಾಗಿ ನಡೆಯುತ್ತಿರುವುದು. ಪಾಪವು ನಾಶವನ್ನು ಹೊಂದುವುದು. ಕಾಮಕ್ರೋಧಾದಿ ಶತ್ರುಗಳು ಪಲಾಯನಹೊಂದುವರು. ಕಾಲಸುಖವಾಗಿ ಕಳೆಯುವುದು. ಜ್ಞಾನ ಮತ್ತು ಆನಂದವೆಂಬ ಸಸಿ ಚೆನ್ನಾಗಿ ಫಲಿಸುವುದು. ||೩೯||

ಧೀಯಂತ್ರೇಣ ವಚೋಘಟೇನ ಕವಿತಾಕುಲ್ಯೋಪಕುಲ್ಯಾ-
ಕ್ರಮೈ
ರಾನೀತೈಶ್ಚ ಸದಾಶಿವಸ್ಯ ಚರಿತಾಂಭೋರಾಶಿ ದಿವ್ಯಾಮೃತೈಃ ।
ಹೃತ್ಕೇದಾರಯುತಾಶ್ಚ ಭಕ್ತಿಕಲಮಾಃ ಸಾಫಲ್ಯಮಾತನ್ವತೇ
ದುರ್ಭಿಕ್ಷಾನ್ಮಮ ಸೇವಕಸ್ಯ ಭಗವನ್ ವಿಶ್ವೇಶ ಭೀತಿಃ
ಕುತಃ ॥೪೦॥

ಪಾಪೋತ್ಪಾತ ವಿಮೋಚನಾಯ ರುಚಿರೈಶ್ವರ್ಯಾಯ
ಮೃತ್ಯುಂಜಯ
ಸ್ತೋತ್ರ ಧ್ಯಾನ ನತಿ ಪ್ರದಕ್ಷಿಣ ಸಪರ್ಯಾಲೋಕನಾ
ಕರ್ಣನೇ ।
ಜಿಹ್ವಾ ಚಿತ್ತಶಿರೋಂಘ್ರಿ ಹಸ್ತನಯನಶ್ರೋತ್ರೈರಹಂ
ಪ್ರಾರ್ಥಿತೋ
ಮಾಮಾಜ್ಞಾಪಯ ತನ್ನಿರೂಪಯ ಮುಹುರ್ಮಾಮೇವ
ಮಾವೇವಚಃ ॥೪೧॥

ಗಾಂಭೀರ್ಯಂ ಪರಿಖಾಪದಂ ಘನಧೃತಿಃ ಪ್ರಾಕಾರ
ಉದ್ಯದ್ಗುಣ
ಸ್ತೋಮಶ್ಚಾಪ್ತಬಲಂ ಘನೇಂದ್ರಿಯಚಯೋ ದ್ವಾರಾಣಿ
ದೇಹಸ್ಥಿತಃ ।
ವಿದ್ಯಾವಸ್ತುಸಮೃದ್ಧಿ ರಿತ್ಯಖಿಲಸಾಮಗ್ರೀಸಮೇತೇ ಸದಾ
ದುರ್ಗಾತಿಪ್ರಿಯ ದೇವ ಮಾಮಕಮನೋದುರ್ಗೇ
ನಿವಾಸಂಕುರು ॥೪೨॥

ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ ಮಯ್ಯೇವ ವಾಸಂ
ಕುರು
ಸ್ವಾಮಿನ್ನಾದಿಕಿರಾತ ಮಾಮಕಮನಃಕಾಂತಾರಸೀಮಾಂತರೇ ।
ವರ್ತಂತೇ ಬಹುಶೋ ಮೃಗಾಮದಜುಷೋ ಮಾತ್ಸರ್ಯ
ಮೋಹಾದಯ
ಸ್ತಾನ್ ಹತ್ವಾ ಮೃಗಯಾವಿನೋದರುಚಿತಾಲಾಭಂ ಚ
ಸಂಪ್ರಾಪ್ಸ್ಯಸಿ ॥೪೩॥

ಹೇ ವಿಶ್ವೇಶ, ಭಗವನ್, ವಾಕ್ ಎಂಬ ಪಾತ್ರೆಯಿಂದ ಬುದ್ಧಿಯೆಂಬ ಯಂತ್ರದ ಮೂಲಕ ಕವಿತೆಯ ನಾನಾ ಕಾಲುವೆಗಳ ಮೂಲಕ ಬಂದ, ಸದಾಶಿವನ ಚರಿತ್ರೆ ಎಂಬ ಜಲರಾಶಿ, ಹೃದಯಕೇದಾರದಲ್ಲಿ ನೆಟ್ಟಿರುವ ಭಕ್ತಿ ಪೈರನ್ನು ಚೆನ್ನಾಗಿ ಬೆಳೆಸುವುದು. ಆದಕಾರಣ ನಿನ್ನ ಸೇವಕನಾದ ನನಗೆ ದುರ್ಭಿಕ್ಷದ ಭೀತಿ ಹೇಗೆ ಉಂಟಾದೀತು. ||೪೦||

ಹೇ ಮೃತ್ಯುಂಜಯ, ಪಾಪಗಳ ವಿಮೋಚನಕ್ಕಾಗಿಯೂ, ಪ್ರಕಾಶ ಮಾನವಾದ ಐಶ್ವರ್ಯಕ್ಕಾಗಿಯೂ, ಸ್ತೋತ್ರಧ್ಯಾನ ಪ್ರದಕ್ಷಿಣೆ ನಮಸ್ಕಾರ ಪೂಜೆ ದರ್ಶನ ಚರಿತ್ರಶ್ರವಣ ಇವುಗಳಲ್ಲಿ ನಾಲಿಗೆ ಮನಸ್ಸು ತಲೆ ಕಾಲು ಕೈಗಳು ಕಣ್ಣು ಕಿವಿ ಇವುಗಳ ಮೂಲಕ ಪ್ರಾರ್ಥಿಸುತ್ತಿರುವೆನು. ಇವುಗಳನ್ನೇ ಮಾಡುತ್ತಿರುವಂತೆ ಆಜ್ಞಾಪಿಸು. ಬಾರಿಬಾರಿಗೂ ಹೇಗೆ ನಿನ್ನನ್ನು ಪೂಜಿಸ ಬೇಕೆಂಬುದನ್ನು ತೋರು. ಇದನ್ನು ಮಾಡುವುದಕ್ಕೆ ಯಾವ ನಿರ್ಬಂಧವೂ ಇಲ್ಲದಿರಲಿ. ||೪೧||

ಹೇ ದುರ್ಗಾತಿಪ್ರಿಯ ದೇವ, ಗಾಂಭೀರ್ಯವೇ ಕಂದಕವಾಗಿದೆ. ಧೈರ್ಯವೇ ಪ್ರಾಕಾರವಾಗಿದೆ. ವೃದ್ಧಿಯಾಗಿರುವ ಸತ್ತ್ವಾದಿಗುಣಗಳೇ ನಂಬಿಕೆಗೆ ಅರ್ಹವಾದ ಸೇನೆಯಾಗಿದೆ. ದೇಹದಲ್ಲಿರುವ ಪಂಚೇಂದ್ರಿಯಗಳೇ ಬಾಗಿಲುಗಳಾಗಿವೆ. ಜ್ಞಾನವೆಂಬ ವಸ್ತು ಸಮೃದ್ಧಿಯಾಗಿದೆ. ಇಲ್ಲಿ ಅಖಿಲ ಸಾಮಗ್ರೀ ಸಮೇತ ನನ್ನ ಮನಸ್ಸೆಂಬ ಕೋಟೆಯಲ್ಲಿ ವಾಸಮಾಡು. ||೪೨||

ಹೇ ಗಿರೀಶ, ಆದಿಕಿರಾತನೆ, ಸ್ವಾಮಿನ್, ನನ್ನ ಮನಸ್ಸೆಂಬ ಅಡವಿ ಯೊಳಗೆ ಕಾಮಕ್ರೋಧಾದಿ ಮೃಗಗಳು ನೆಲೆಗೊಂಡಿವೆ. ಅವುಗಳನ್ನು ಕೊಂದು ಬೇಟೆಯ ಆನಂದವನ್ನು ಪಡೆ. ಅದಕ್ಕಾಗಿ ನನ್ನಲ್ಲಿಯೇ ನೆಲಸು. ನೀನು ಇಂತಹ ನನ್ನ ಮನಸ್ಸೆಂಬ ಕಾಂತಾರವನ್ನು ಬಿಟ್ಟು ಹೋಗಬೇಡ. ||೪೩||

ಕರಲಗ್ನಮೃಗಃ ಕರೀಂದ್ರಭಂಗೋ
ಘನಶಾರ್ದೂಲ ವಿಖಂಡನೋಽಸ್ತಜಂತುಃ ।
ಗಿರಿಶೋ ವಿಶದಾಕೃತಿಶ್ಚ ಚೇತಃ
ಕುಹರೇ ಪಂಚಮುಖೋಽಸ್ತಿ ಮೇ ಕುತೋ ಭೀಃ ॥೪೪॥

ಛಂದಃ ಶಾಖಿ ಶಿಖಾನ್ವಿತೈ ರ್ದ್ವಿಜವರೈ ಸಂಸೇವಿತೇ ಶಾಶ್ವತೇ
ಸೌಖ್ಯಾಪಾದಿನಿ ಖೇದಭೇದಿನಿ ಸುಧಾಸಾರೈಃ ಫಲೈರ್ದೀಪಿತೇ ।
ಚೇತಃ ಪಕ್ಷಿಶಿಖಾಮಣೇ ತ್ಯಜ ವೃಥಾ ಸಂಚಾರಮನ್ಯೈರಲಂ
ನಿತ್ಯಂ ಶಂಕರ ಪಾದಪದ್ಮಯುಗಳೀನೀಡೇ ವಿಹಾರಂ ಕುರು
॥೪೫॥

ಆಕೀರ್ಣೇ ನಖರಾಜಿ ಕಾಂತಿವಿಭವೈ ರುದ್ಯತ್ಸುಧಾವೈಭವೈ
ರಾಧೌತೇಽಪಿ ಚ ಪದ್ಮರಾಗಲಲಿತೇ ಹಂಸವ್ರಜೈರಾಶ್ರಿತೇ ।
ನಿತ್ಯಂ ಭಕ್ತಿವಧೂಗಣೈಶ್ಚ ರಹಸಿ ಸ್ವೇಚ್ಛಾವಿಹಾರಂ ಕುರು
ಸ್ಥಿತ್ವಾ ಮಾನಸರಾಜಹಂಸ ಗಿರಿಜಾನಾಥಾಂಘ್ರಿಸೌಧಾಂತರೇ
॥೪೬॥

ಶಂಭುಧ್ಯಾನವಸಂತಸಂಗಿನಿ ಹೃದಾರಾಮೇಽಘಜೀರ್ಣಚ್ಛದಾಃ
ಸ್ರಸ್ತಾ ಭಕ್ತಿಲತಾಚ್ಛಟಾ ವಿಲಸಿತಾಃ ಪುಣ್ಯಪ್ರವಾಳಾಶ್ರಿತಾಃ ।
ದೀಪ್ಯಂತೇ ಗುಣಕೋರಕಾ ಜಪವಚಃಪುಷ್ಪಾಣಿ ಸದ್ವಾಸನಾ
ಜ್ಞಾನಾನಂದಸುಧಾಮರಂದಲಹರೀ ಸಂವಿತ್ಫಲಾಭ್ಯುನ್ನತಿಃ
॥೪೭॥

ಕೈಯ್ಯಲ್ಲಿ ಸಿಕ್ಕಿರುವ ಮೃಗವುಳ್ಳವನಾಗಿಯೂ, ಗಜಾಸುರಸಂಹಾರಿಯಾಗಿಯೂ, ದೊಡ್ಡದಾದ ಹುಲಿಯನ್ನು ಸಂಹರಿಸುವನಾಗಿಯೂ, ಪ್ರಾಣಿಗಳಿಗೆ ಮೃತ್ಯುಪ್ರಾಯನಾಗಿರುವ ಪರಮೇಶ್ವರನೆಂಬ ಸಿಂಹ ಹೃದಯ ಗುಹೆಯಲ್ಲಿ ಇರುವಾಗ ಇನ್ನು ಭಯ ಏತರಿಂದ ಆದೀತು? ||೪೪||

ಎಲೈ ಮನಸ್ಸೆಂಬ ಶ್ರೇಷ್ಠವಾದ ಹಕ್ಕಿಯೆ, ಉಪನಿಷತ್ತನ್ನು ತಿಳಿದಿರುವ ದ್ವಿಜಶ್ರೇಷ್ಠರಿಂದ ಆಶ್ರಯಿಸಲ್ಪಟ್ಟ, ಖೇದವನ್ನು ಹೋಗಲಾಡಿಸುವ, ಅಮೃತರಸದಂತೆ ಮಧುರವಾದ ಹಣ್ಣುಗಳಿಂದ ಕೂಡಿರುವ ಶಂಕರನೆಂಬ ಪಾದಪದ್ಮಗಳಡಿಯಲ್ಲಿ ವಿಹರಿಸು. ಇತರ ಹವ್ಯಾಸವನ್ನು ತ್ಯಜಿಸು. ||೪೫||

ಎಲೈ ಮಾನಸರಾಜಹಂಸನೇ, ಉಗುರುಗಳ ಕಾಂತಿಯಿಂದ ವ್ಯಾಪಿಸಿರುವ, ಉದಯಿಸುತ್ತಿರುವ ಅಮೃತದ ವೈಭವದಿಂದ ಕೂಡಿರುವ, ನಿರ್ಮಲವಾಗಿರುವ ಪದ್ಮರಾಗರತ್ನಗಳಿಂದ ಸುಂದರವಾದ, ಪರಮಹಂಸರಾದ ಯತಿಗಳಿಂದ ಆಶ್ರಯಿಸಲ್ಪಟ್ಟ ಗಿರಿಜಾನಾಥನ ಪಾದಗೃಹದ ಎಡೆಯಲ್ಲಿ, ಭಕ್ತಿವಧುಗಳೊಡನೆ ಯಾವಾಗಲೂ ವಾಸಮಾಡುತ್ತ ಸ್ವೇಚ್ಛೆಯಿಂದ ವಿಹರಿಸು. ||೪೬||

ಶಂಭುಧ್ಯಾನವೆಂಬ ವಸಂತಸಂಗದಿಂದ ಹೃದಯದ ಉದ್ಯಾನ ಮರಗಳ ಪಾಪಗಳೆಂಬ ಹಣ್ಣೆಲೆ ಉದುರಿಹೋದವು. ಪುಣ್ಯ ತಳಿರುಗಳು ಮೂಡಿದವು. ಸದ್ಗುಣಗಳೆಂಬ ಮೊಗ್ಗುಗಳು ಬಿಟ್ಟವು. ಜಪಮಂತ್ರವೆಂಬ ಹೂವು ಅರಳಿದವು. ಸದ್ವಾಸನೆಯನ್ನು ಬೀರುತ್ತಿರುವ ಭಕ್ತಿಲತೆ ಹಬ್ಬಿದೆ. ಜ್ಞಾನಾನಂದಸುಧೆ ಎಂಬ ಮಕರಂದ ಲಹರೀ ಬ್ರಹ್ಮಜ್ಞಾನವೆಂಬ ಫಲವನ್ನು ಬೇಕಾದಷ್ಟು ನೀಡಿದೆ. ||೪೭||

ನಿತ್ಯಾನಂದರಸಾಲಯಂ ಸುರಮುನಿಸ್ವಾಂತಾಬುಜಾತಾಶ್ರಯಂ
ಸ್ವಚ್ಛಂ ಸದ್ವಿಜಸೇವಿತಂ ಕಲುಷಹೃತ್ಸದ್ವಾಸನಾವಿಷ್ಕೃತಂ ।
ಶಂಭುಧ್ಯಾನಸರೋವರಂ ವ್ರಜ ಮನೋಹಂಸಾವತಂಸ ಸ್ಥಿರಂ
ಕಿಂ ಕ್ಷುದ್ರಾಶ್ರಯ ಪಲ್ವಲಭ್ರಮಣ ಸಂಜಾತಶ್ರಮಂ
ಪ್ರಾಪ್ಸ್ಯಸಿ ॥೪೮॥

ಆನಂದಾಮೃತಪೂರಿತಾ ಹರಪದಾಂಭೋಜಾಲವಾಲೋದ್ಗತಾ
ಸ್ಥೈರ್ಯೋಪಘ್ನಮುಪೇತ್ಯ ಭಕ್ತಿಲತಿಕಾ ಶಾಖೋಪಶಾಖಾ
ನ್ವಿತಾ ।
ಉಚ್ಚೈರ್ಮಾನಸಕಾಯಮಾನಪಟಲೀಮಾಕ್ರಮ್ಯ ನಿಷ್ಕಲ್ಮಷಾ
ನಿತ್ಯಾಭೀಷ್ಟಫಲಪ್ರದಾ ಭವತು ಮೇ ಸತ್ಕರ್ಮಸಂವರ್ಧಿತಾ
॥೪೯॥

ಸಂಧ್ಯಾರಂಭವಿಜೃಂಭಿತಂ ಶ್ರುತಿಶಿರಃ ಸ್ಥಾನಾಂತರಾದಿಷ್ಠಿತಂ
ಸಪ್ರೇಮಭ್ರಮರಾಭಿರಾಮಮಸಕೃತ್ಸದ್ವಾಸನಾಶೋಭಿತಮ್ ।
ಭೋಗೀಂದ್ರಾಭರಣಂ ಸಮಸ್ತಸುಮನಃ ಪೂಜ್ಯಂ
ಗುಣಾವಿಷ್ಕೃತಂ
ಸೇವೇ ಶ್ರೀಗಿರಿಮಲ್ಲಿಕಾರ್ಜುನಮಹಾಲಿಂಗಂ ಶಿವಾಲಿಂಗಿತಮ್
॥೫೦॥

ಭೃಂಗೀಚ್ಛಾ ನಟನೋತ್ಕಟಃ ಕರಿಮದಗ್ರಾಹೀಸ್ಫುರನ್ಮಾಧವಾ
ಹ್ಲಾದೋ ನಾದಯುತೋ ಮಹಾಸಿತವಪುಃ ಪಂಚೇಷುಣಾ
ಚಾದೃತಃ ।
ಸತ್ಪಕ್ಷಃ ಸುಮನೋವನೇಷು ಸ ಪುನಃ ಸಾಕ್ಷಾನ್ಮದೀಯೇ
ಮನೋ
ರಾಜೀವೇ ಭ್ರಮರಾಧಿಪೋ ವಿಹರತಾಂ ಶ್ರೀಶೈಲವಾಸೀ ವಿಭುಃ
॥೫೧॥

ಎಲೈ ಮನಸ್ಸೆಂಬ ರಾಜಹಂಸವೆ, ನಿತ್ಯಾನಂದರಸಕ್ಕೆ ಆಲಯ ವಾಗಿರುವ, ದೇವತೆಗಳು ಮತ್ತು ಮುನಿಗಳು ಎಂಬ ಕಮಲಕ್ಕೆ ಆಶ್ರಯ ವಾಗಿರುವ ನಿರ್ಮಲವಾಗಿರುವ, ಸತ್ಪುರುಷರೆಂಬ ಪಕ್ಷಿಗಳಿಂದ ಸೇವಿಸ ಲ್ಪಟ್ಟಿರುವ, ಕಳಂಕವನ್ನು ಪರಿಹರಿಸುವ, ಉತ್ತಮ ಸಂಸ್ಕಾರಗಳನ್ನು ಉದ್ದೀಪನಗೊಳಿಸುವ ಶಂಭುಧ್ಯಾನ ಸರೋವರವನ್ನು ಸೇರು. ಕ್ಷುದ್ರ ಜನಗಳ ಆಶ್ರಯವೆಂಬ ಗುಂಡಿಯಲ್ಲಿ ಏತಕ್ಕೆ ವ್ಯಥೆಪಡುತ್ತಿರುವೆ. ||೪೮||

ಶಿವಭಜನಾನಂದವೆಂಬ ನೀರಿನಿಂದ ನೆನೆಸಲ್ಪಟ್ಟ, ಪರಮೇಶ್ವರನ ಪಾದಕಮಲಗಳಿಂದ ಮೊಳೆತಿರುವ, ಸ್ಥೈರ್ಯವೆಂಬ ಆಶ್ರಯವೃಕ್ಷವನ್ನು ಹೊಂದಿ ಶಾಖೋಪಶಾಖೆಗಳಿಂದ ಕೂಡಿರುವ, ಮನಸ್ಸೆಂಬ ಚಪ್ಪರದ ಮೇಲ್ಭಾಗವನ್ನು ಹಬ್ಬಿರುವ, ಸತ್ಕರ್ಮಗಳಿಂದ ಶೋಭಿಸುತ್ತಿರುವ, ದೋಷರಹಿತವಾಗಿರುವ ಶಿವಭಕ್ತಿಲತೆ ನನಗೆ ನಿತ್ಯವಾದ ಇಷ್ಟಾರ್ಥ ಫಲಗಳನ್ನು ನೀಡುವಂತೆ ಆಗಲಿ. ||೪೯||

ಸಂಧ್ಯಾಕಾಲದ ನಾಟ್ಯದ ಆರಂಭಕಾಲದಲ್ಲಿ ವಿಜೃಂಭಿಸುವ, ಉಪ ನಿಷತ್ತುಗಳೆಂಬ ಸ್ಥಾನಾಂತರದಲ್ಲಿ ನೆಲೆಗೊಂಡಿರುವ, ಪ್ರೇಮಸಹಿತೆಯಾದ ಭ್ರಮರಾಂಬಿಕೆಯಿಂದ ಕೂಡಿದ ಸದ್ವಾಸನೆಯಿಂದ ಶೋಭಿಸುತ್ತಿರುವ, ಸರ್ಪಭೂಷಣನಾದ, ಸಮಸ್ತ ದೇವತೆಗಳಿಂದ ಪೂಜಿಸಲ್ಪಡುತ್ತಿರುವ, ಸತ್ತ್ವಗುಣದಿಂದ ಪ್ರಕಾಶಿಸುತ್ತಲಿರುವ ಶಿವೆಯನ್ನು ಆಲಿಂಗಿಸಿರುವ ಶ್ರೀಗಿರಿ ಯಲ್ಲಿರುವ ಮಲ್ಲಿಕಾರ್ಜುನ ಮಹಾಲಿಂಗವನ್ನು ಭಜಿಸುತ್ತೇನೆ. ||೫೦||

ಭೃಂಗಿ ಎಂಬ ಗಣದ ಇಚ್ಛೆಯ ಮೇಲೆ ನಾಟ್ಯವಾಡುವುದರಲ್ಲಿ ಉತ್ಕಟ ಇಚ್ಛೆಯುಳ್ಳವನಾದ, ಗಜಾಸುರನ ಮದವನ್ನು ಹರಿಸುವ, ಪ್ರಕಾಶವಾದ ವಿಷ್ಣುವಿನ ಆಹ್ಲಾದವುಳ್ಳ, ಪ್ರಣವನಾದದೊಂದಿಗೆ ಸೇರಿದ, ಮಹಾ ಪ್ರಮಾಣವುಳ್ಳ ಶ್ವೇತಕಾಯನಾಗಿರುವ, ಮನ್ಮಥನಿಂದ ಗುರಿಮಾಡ ಲ್ಪಟ್ಟಿರುವ, ದೇವತೆಗಳು ಮತ್ತು ವನದ ರಕ್ಷೆಯಲ್ಲಿ ಅಭಿಮಾನವುಳ್ಳ ಪ್ರಸಿದ್ಧನಾಗಿ ಶ್ರೀಶೈಲದಲ್ಲಿ ನೆಲೆಸಿರುವ ವಿಭುವಾದ ಭ್ರಮರಾವಲ್ಲಭನಾದ ಶ್ರೀಮಲ್ಲಿಕಾರ್ಜುನನು ನನ್ನ ಮನಸ್ಸೆಂಬ ಕಮಲದಲ್ಲಿ ಪ್ರತ್ಯಕ್ಷವಾಗಿ ವಿಹರಿಸಲಿ, ||೫೧||

ಕರುಣಾಮೃತವರ್ಷಿಣಂ ಘನವಿಪದ್ಗ್ರೀಷ್ಮಚ್ಛಿದಾಕರ್ಮಠಂ
ವಿದ್ಯಾಸಸ್ಯಫಲೋದಯಾಯ ಸುಮನಃ ಸಂಸೇವ್ಯಮಿಚ್ಛಾ
ಕೃತಿಮ್ ।
ನೃತ್ಯದ್ಭಕ್ತಮಯೂರಮದ್ರಿನಿಲಯಂ ಚಂಚಜ್ಜಟಾಮಂಡಲಂ
ಶಂಭೋ ವಾಂಛತಿ ನೀಲಕಂಧರಃ ಸದಾ ತ್ವಾಂ ಮೇ
ಮನಶ್ಚಾತಕಃ ॥೫೨॥

ಆಕಾಶೇನ ಶಿಖೀ ಸಮಸ್ತಫಣಿನಾಂ ನೇತ್ರಾ ಕಲಾಪಿ ನತಾ
ನುಗ್ರಾಹೀ ಪ್ರಣವೋಪದೇಶನಿನದೈಃ ಕೇಕೀತಿ ಯೋ ಗೀಯತೇ
ಶ್ಯಾಮಾಂ ಶೈಲಸಮುದ್ಭವಾಂ ಘನರುಚಿಂ ದೃಷ್ಟ್ವಾ ನಟಂತಂ
ಮುದಾ
ವೇದಾಂತೋಪವನೇ ವಿಹಾರರಸಿಕಂ ತಂ ನೀಲಕಂಠಂ ಭಜೇ
॥೫೩॥

ಸಂಧ್ಯಾಘರ್ಮದಿನಾತ್ಯಯೋ ಹರಿಕರಾಘಾತಪ್ರಭೂತಾನಕ
ಧ್ವಾನೋ ವಾರಿದಗರ್ಜಿತಂ ದಿವಿಷದಾಂ ದೃಷ್ಟಿಚ್ಛಟಾ
ಚಂಚಲಾ ।
ಭಕ್ತಾನಾಂ ಪರಿತೋಷಬಾಷ್ಪವಿತತಿರ್ವೃಷ್ಟಿರ್ಮಯೂರೀ ಶಿವಾ
ಯಸ್ಮಿನ್ನುಜ್ಜ್ವಲತಾಂಡವಂ ವಿಜಯತೇ ತಂ ನೀಲಕಠಂ ಭಜೇ
॥೫೪॥

ಆದ್ಯಾಯಾಮಿತ ತೇಜಸೇ ಶ್ರುತಿಪದೈರ್ವೇದ್ಯಾಯ
ಸಾಧ್ಯಾಯ ತೇ
ವಿದ್ಯಾನಂದಮಯಾತ್ಮನೇ ತ್ರಿಜಗತಸ್ಸಂರಕ್ಷಣೋದ್ಯೋಗಿನೇ।
ಧ್ಯೇಯಾಯಾಖಿಲ ಯೋಗಿಭಿಸ್ಸುರಗಣೈರ್ಗೇಯಾಯ
ಮಾಯಾವಿನೇ
ಸಮ್ಯಕ್ತಾಂಡವಸಂಭ್ರಮಾಯ ಜಟಿನೇ ಸೇಯಂ ನತಿಃ
ಶಂಭವೇ ॥೫೫॥

ಹೇ ಶಂಭೋ, ನೀಲಕಂಠ, ಕರುಣಾಮೃತವನ್ನು ಸುರಿಸುವ, ವಿಪತ್ತೆಂಬ ತಾಪವನ್ನು ತಗ್ಗಿಸುವ, ವಿದ್ಯೆ ಎಂಬ ಪೈರನ್ನು ಕೃಷಿಮಾಡಲು ವಿದ್ಯಾವಂತರಿಂದ ಆಶ್ರಯಿಸಲ್ಪಟ್ಟಂತಹ, ಸ್ವೇಚ್ಛೆಯಿಂದ ಕುಣಿದಾಡುವ ನವಿಲುಗಳು ಇರುವ ಕೈಲಾಸದಲ್ಲಿ ನೆಲೆಸಿರುವ, ಜಟಾಧಾರಿಯಾದ ನಿನ್ನನ್ನೇ ನನ್ನ ಮನಸ್ಸೆಂಬ ಚಾತಕ ಅನವರತ ಚಿಂತಿಸುತ್ತಿದೆ. ||೫೨||

ಯಾರು ಆಕಾಶದಂತೆ ತೋರುವ ಶಿಖಿಯುಳ್ಳವನಾಗಿರುವನೊ, ಆದಿಶೇಷನನ್ನು ಭೂಷಣವಾಗಿ ಪಡೆದಿರುವನೊ, ಯಾರು ತನ್ನನ್ನು ಭಜಿಸುವವರನ್ನು ಅನುಗ್ರಹಿಸುವನೊ, ಪ್ರಣವನಾದದಿಂದ ಕೇಕೇ ಎಂಬುದಾಗಿ ಹಾಡುತ್ತಿರುವನೊ, ಶ್ಯಾಮಲವರ್ಣದ ಗಿರಿಸುತೆಯೆಂಬ ಮೇಘಕಾಂತಿಯನ್ನು ನೋಡಿ ಸಂತೋಷದಿಂದ ಕುಣಿಯುವನೊ, ವೇದಾಂತವೆಂಬ ಉಪವನದಲ್ಲಿ ವಿಹಾರರಸಿಕನಾದಂತಹ ನೀಲಕಂಠನೆಂಬ ನವಿಲನ್ನು ಭಜಿಸುತ್ತೇನೆ. ||೫೩||

ಪರಮೇಶ್ವರನು ನರ್ತಿಸುತ್ತಿರುವಾಗ ಗ್ರೀಷ್ಮಕಾಲದ ಸಂಜೆ. ವಿಷ್ಣು ತನ್ನ ಕೈಗಳಿಂದ ಬಾರಿಸುತ್ತಿರುವ ಮದ್ದಲೆ ಮೇಘಗರ್ಜನೆಯಂತೆ ಇದೆ. ನೋಡುತ್ತಿರುವ ದೇವತೆಗಳ ಕಣ್ಣಿನ ಕಾಂತಿ ಮಿಂಚಿನಂತೆ ಇದೆ. ಭಕ್ತರು ಸುರಿಸುವ ಆನಂದಾಶ್ರುಗಳು ಮಳೆಯಂತೆ ಇವೆ. ಶಿವೆ ಹೆಣ್ಣುನವಿಲಿನಂತೆ ಅವನೊಡನೆ ನರ್ತಿಸುತ್ತಿರುವಳು. ಇಂತಹ ಅದ್ಭುತವಾದ ನಾಟ್ಯದಲ್ಲಿ ನಿರತನಾದ ನೀಲಕಂಠನನ್ನು ಭಜಿಸುತ್ತೇನೆ. ||೫೪||

ಸರ್ವಲೋಕಗಳಿಗೂ ಆದಿಯಾಗಿ, ಅಮಿತ ತೇಜಸ್ಸುಳ್ಳವನಾಗಿ, ಶ್ರುತಿಪದಗಳಿಂದ ತಿಳಿಸಲ್ಪಡತಕ್ಕವನಾಗಿ, ಭಕ್ತಾನುಗ್ರಹಕ್ಕೋಸ್ಕರ ಅರ್ಚಾದಿರೂಪದಿಂದ ಪೂಜ್ಯನಾಗಿ, ಜ್ಞಾನಾನಂದಮಯನಾಗಿರುವ, ಮೂರು ಲೋಕಗಳ ರಕ್ಷಣೆಯಲ್ಲಿ ನಿರತನಾಗಿರುವ, ಧ್ಯಾನವಸ್ತುವಾಗಿರುವ, ಅಖಿಲ ಯೋಗಿ ಮತ್ತು ಸುರಗಣಗಳಿಂದ ಸ್ತುತಿಸಲ್ಪಡುತ್ತಿರುವ, ಮಾಯಾವಿಯೆ, ನಟನವಿನೋದದಲ್ಲಿ ನಿರತನಾದ ಶಂಭುವೆ, ನಿನಗೆ ನಮಸ್ಕಾರಗಳು. ||೫೫||

ನಿತ್ಯಾಯ ತ್ರಿಗುಣಾತ್ಮನೇ ಪುರಜಿತೇ ಕಾತ್ಯಾಯಿನೀಶ್ರೇಯಸೇ
ಸತ್ಯಾಯಾದಿಕುಟುಂಬಿನೇ ಮುನಿಮನಃ ಪ್ರತ್ಯಕ್ಷಚಿನ್ಮೂ
ರ್ತಯೇ ।
ಮಾಯಾಸೃಷ್ಟಜಗತ್ರಯಾಯ ಸಕಲಾಮ್ನಾಯಾಂತ
ಸಂಚಾರಿಣೇ
ಸಾಯಂತಾಂಡವಸಂಭ್ರಮಾಯ ಜಟಿನೇ ಸೇಯಂ ನತಿಃ
ಶಂಭವೇ ॥೫೬॥

ನಿತ್ಯಂ ಸೋದರಪೂರಣಾಯ ಸಕಲಾನುದ್ದಿಶ್ಯವಿತ್ತಾಶಯಾ
ವ್ಯರ್ಥಂ ಪರ್ಯಟನಂ ಕರೋಮಿ ಭವತಃ ಸೇವಾಂ ನ ಜಾನೇ
ವಿಭೋ ।
ಮಜ್ಜನ್ಮಾಂತರಪುಣ್ಯಪಾಕಬಲತಸ್ತ್ವಂ ಶರ್ವ ಸರ್ವಾಂತರ
ಸ್ತಿಷ್ಠಸ್ಯೇವ ಹಿ ತೇನ ವಾ ಪಶುಪತೇ ರಕ್ಷಣೀಯೋಸ್ಮ್ಯಹಂ
॥೫೭॥

ಏಕೋ ವಾರಿಜಬಾಂಧವಃ ಕ್ಷಿತಿನಭೋವ್ಯಾಪ್ತಂ ತಮೋ
ಮಂಡಲಂ
ಭಿತ್ವಾ ಲೋಚನಗೋಚರೋಪಿ ಭವತಿ ತ್ವಂ ಕೋಟಿಸೂರ್ಯ
ಪ್ರಭಃ ।
ವೇದ್ಯಃ ಕಿಂ ನ ಭವಸ್ಯಹೋ ಘನತರಂ ಕೀದೃಗ್ಭವೇನ್ಮಸ್ತಮ
ಸ್ತತ್ಸರ್ವಂ ವ್ಯಪನೀಯ ಮೇ ಪಶುಪತೇ ಸಾಕ್ಷಾತ್ಪ್ರಸನ್ನೋ
ಭವ ॥೫೮॥

ಹಂಸಃ ಪದ್ಮವನಂ ಸಮಿಚ್ಛತಿ ಯಥಾನೀಲಾಂಬುದಂ ಚಾತಕಃ
ಕೋಕಂ ಕೋಕನದಪ್ರಿಯಂ ಪ್ರತಿದಿನಂ ಚಂದ್ರಂ ಚಕೋರ
ಸ್ತಥಾ ।
ಚೇತೋ ವಾಂಛತಿ ಮಾಮಕಂ ಪಶುಪತೇ ಚಿನ್ಮಾರ್ಗಮೃಗ್ಯಂ
ವಿಭೋ
ಗೌರೀನಾಥಭವತ್ಪದಾಬ್ಜಯುಗಳಂ ಕೈವಲ್ಯಸೌಖ್ಯಪ್ರದಂ
॥೫೯॥

ನಿತ್ಯನಾಗಿಯೂ, ತ್ರಿಗುಣಾತ್ಮನಾಗಿಯೂ, ತ್ರಿಪುರಧ್ವಂಸಿಯಾಗಿಯೂ, ಕಾತ್ಯಾಯಿನಿಯ ತಪಃಫಲಸ್ವರೂಪನಾಗಿಯೂ, ಸತ್ಯನಾಗಿಯೂ, ಜಗತ್ತಿನ ಆದಿಕುಟುಂಬಿಯಾಗಿರುವ, ಮುನಿಗಳ ಮನಸ್ಸಿನಲ್ಲಿ ಗೋಚರಿಸುವ ಚಿದಾನಂತಮೂರ್ತಿಯಾಗಿಯೂ, ಮಾಯೆಯಿಂದ ತ್ರಿಜಗತ್ತುಗಳನ್ನು ಸೃಷ್ಟಿಸಿದವನಾಗಿಯೂ, ಸಕಲವೇದಾಂತಪ್ರತಿಪಾದ್ಯನಾಗಿಯೂ ಸಾಯಂಕಾಲದಲ್ಲಿ ತಾಂಡವಲೀಲೆಯಲ್ಲಿ ನಿರತನಾದ ಜಟಾಧಾರಿಯಾದ ಶಿವನಿಗೆ ನಮಸ್ಕಾರಗಳು.॥೫೬॥

ಹೇ ವಿಭು, ಮೋಕ್ಷದಾಯಕನೆ, ಯಾವಾಗಲೂ ನನ್ನ ಹೊಟ್ಟೆಪಾಡಿಗಾಗಿ ಧನಾಪೇಕ್ಷೆಯಿಂದ ಎಲ್ಲರ ಬಳಿಗೂ ವ್ಯರ್ಥವಾಗಿ ಹೋಗುತ್ತಿರುವೆನು. ಆದರೆ ನಿನ್ನ ಸೇವೆಯನ್ನು ತಿಳಿಯಲಿಲ್ಲ. ಹೇ ಪಶುಪತಿ, ನೀನು ನನ್ನ ಜನ್ಮಾಂತರದ ಪುಣ್ಯಪರಿಪಾಕದ ಬಲದಿಂದ ಸರ್ವಾಂತರ್ಯಾಮಿಯಾಗಿ ಇರುವೆ. ನನಗೆ ಹಿತಮಾಡಬೇಕೆಂಬ ದೃಷ್ಟಿಯಿಂದಲಾದರೂ ನೋಡು. ನಾನು ನಿನ್ನ ಕೃಪೆಗೆ ಪಾತ್ರನಾಗಿದ್ದೇನೆ. ॥೫೭॥

ಹೇ ಪಶುಪತಿ, ಸೂರ್ಯ ಒಬ್ಬನಾದರೂ ಭೂಮಿ ಆಕಾಶಗಳನ್ನು ವ್ಯಾಪಿಸಿರುವ ಅಂಧಕಾರವನ್ನು ಭೇದಿಸಿ ಎಲ್ಲರ ಕಣ್ಣಿಗೂ ಕಾಣುವನು. ನೀನು ಕೋಟಿಸೂರ್ಯಪ್ರಕಾಶನಾದರೂ ನನಗೆ ಏತಕ್ಕೆ ಕಾಣುತ್ತಿಲ್ಲ. ನನ್ನ ತಮಸ್ಸಿನ ಅಂಧಕಾರ ಹೇಗೆ ಆಯಿತು ಆಶ್ಚರ್ಯ. ಅದನ್ನೆಲ್ಲ ಪರಿಹರಿಸಿ ನನ್ನ ಮೇಲೆ ದಯೆ ತಾಳಿ ಪ್ರತ್ಯಕ್ಷನಾಗು. ॥೫೮॥

ಹೇ ಪಶುಪತಿ, ಹೇ ವಿಭೋ, ಗೌರೀನಾಥ, ಹಂಸವು ಪದ್ಮವನವನ್ನು ಕೋರುವಂತೆ, ಚಾತಕ ನೀಲಮೇಘವನ್ನು ಬಯಸುವಂತೆ, ಕೋಕ ಸೂರ್ಯನನ್ನು ಅಪೇಕ್ಷಿಸುವಂತೆ, ಚಕೋರ ಪ್ರತಿದಿನ ಚಂದ್ರನನ್ನು ಆಶಿಸುವಂತೆ, ನನ್ನ ಮನಸ್ಸು ಚಿನ್ಮಾರ್ಗದಿಂದ ದೊರೆಯತಕ್ಕಂಥ, ಕೈವಲ್ಯ ಸೌಖ್ಯವನ್ನು ನೀಡುವ ನಿನ್ನ ಪಾದಾಬ್ಜಯುಗಳನ್ನು ಇಚ್ಛಿಸುತ್ತಿದೆ. ॥೫೯॥

ರೋಧಸ್ತೋಯಹೃತಃ ಶ್ರಮೇಣ ಪಥಿಕಶ್ಛಾಯಾಂ
ತರೋರ್ವೃಷ್ಟಿತಃ
ಭೀತಃ ಸ್ವಸ್ಥಗೃಹಂ ಗೃಹಸ್ಥಮತಿಥಿರ್ದೀನಃ ಪ್ರಭುಂ ಧಾರ್ಮಿಕಂ।
ದೀಪಂ ಸಂತಮಸಾಕುಲಶ್ಚ ಶಿಖಿನಂ ಶೀತಾವೃತಸ್ತ್ವಂ ತಥಾ
ಚೇತಃ ಸರ್ವಭಯಾಪಹಂ ವ್ರಜ ಸುಖಂ ಶಂಭೋಃ ಪದಾಂಬು
ರುಹಂ ॥೬೦॥

ಅಂಕೋಲಂ ನಿಜಬೀಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿಂಧುಃ ಸರಿದ್ವಲ್ಲಭಂ।
ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿಂದ
ದ್ವಯಂ
ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ
॥೬೧॥

ಆನಂದಾಶ್ರುಭಿರಾತನೋತಿ ಪುಲಕಂ ನೈರ್ಮಲ್ಯತಶ್ಛಾದನಂ
ವಾಚಾ ಶಂಖಮುಖೇ ಸ್ಥಿತೈಶ್ಚ ಜಠರಾಪೂರ್ತಿಂ ಚರಿತ್ರಾ-
ಮೃತೈಃ ।
ರುದ್ರಾಕ್ಷೈರ್ಭಸಿತೇನ ದೇವ ವಪುಷೋ ರಕ್ಷಾಂ ಭವದ್ಭಾ-
ವನಾ
ಪರ್ಯಂಕೇ ವಿನಿವೇಶ್ಯ ಭಕ್ತಿಜನನೀ ಭಕ್ತಾರ್ಭಕಂ ರಕ್ಷತಿ
॥೬೨॥

ಮಾರ್ಗಾವರ್ತಿತಪಾದುಕಾ ಪಶುಪತೇರಂಗಸ್ಯ ಕೂರ್ಚಾಯತೇ
ಗಂಡೂಷಾಂಬುನಿಷೇಚನಂ ಪುರರಿಪೋರ್ದಿವ್ಯಾಭಿಷೇಕಾಯತೇ।
ಕಿಂಚಿದ್ಭಕ್ಷಿತ ಮಾಂಸಶೇಷ ಕಬಳಂ ನವ್ಯೋಪಹಾರಾಯತೇ
ಭಕ್ತಿಃ ಕಿಂ ನಕರೋತ್ಯಹೋ ವನಚರೋ ಭಕ್ತಾವತಂಸಾಯತೇ
॥೬೩॥

ಎಲೈ ಹೃದಯವೆ, ಬಾಯಾರಿದವನು ನದೀತೀರವನ್ನು ಆಶ್ರಯಿಸುವಂತೆ, ಪಥಿಕ ಆಯಾಸದಿಂದ ಮರದ ನೆರಳನ್ನು ಆಶ್ರಯಿಸುವಂತೆ, ಮಳೆಯಿಂದ ಭೀತನಾದವನು ಗಟ್ಟಿಯಾದ ಮನೆಯನ್ನು ಆಶ್ರಯಿಸುವಂತೆ, ಅತಿಥಿ ಗೃಹಸ್ಥನನ್ನು ಆಶ್ರಯಿಸುವಂತೆ, ದೀನನಾದವನು ಧಾರ್ಮಿಕನಾದ ಪ್ರಭುವನ್ನು ಆಶ್ರಯಿಸುವಂತೆ, ಕತ್ತಲೆಗೆ ಸಿಕ್ಕಿರುವವನು ದೀಪವನ್ನು ಆಶ್ರಯಿಸುವಂತೆ, ಛಳಿಯಿಂದ ನಡಗುವವನು ಬೆಂಕಿಯನ್ನು ಆಶ್ರಯಿಸುವಂತೆ, ನೀನು ಸಮಸ್ತ ಭಯಗಳನ್ನು ಪರಿಹರಿಸುವಂತಹ ಶಂಭುವಿನ ಪದಾಂಭೋಜವನ್ನು ಸುಖವಾಗಿ ಆಶ್ರಯಿಸು. ||೬೦||

ಅಂಕೋಲದ ಬೀಜವು ಪುನಃ ಅದರ ಮರವನ್ನು ಹೇಗೆ ಸೇರುವುದೋ, ಸೂಜಿಯು ಅಯಸ್ಕಾಂತಶಿಲೆಯನ್ನು ಹೇಗೆ ಸೇರುವುದೊ, ಸಾಧ್ವಿ ತನ್ನ ಪತಿಯನ್ನು ಹೇಗೆ ಆಶ್ರಯಿಸುವಳೊ, ಬಳ್ಳಿ ವೃಕ್ಷವನ್ನು ಹೇಗೆ ಆಶ್ರಯಿಸುವುದೊ, ನದಿ ಸಾಗರವನ್ನು ಹೇಗೆ ಸೇರುವುದೊ ಹಾಗೆ ನನ್ನ ಮನೋವೃತ್ತಿ ಪಶುಪತಿಯ ಪಾದದ್ವಯಗಳನ್ನು ಸದಾ ಆಶ್ರಯಿಸಿದರೆ ಇದನ್ನು ಭಕ್ತಿ ಎನ್ನುವರು. ||೬೧||

ಹೇ ದೇವ, ಭಕ್ತಿ ಎಂಬ ತಾಯಿ, ಭಕ್ತನೆಂಬ ಮಗುವಿಗೆ ಆನಂದ ಭಾಷ್ಪಗಳಿಂದ ರೋಮಾಂಚನವನ್ನು ಉಂಟುಮಾಡುವಳು. ನೈರ್ಮಲ್ಯದ ಹೊದಿಕೆಯನ್ನು ಹೊದಿಸುವಳು. ವಾಕ್ ಎಂಬ ಶಂಖದ ಕೊನೆಯಿಂದ ನಿನ್ನ ಚರಿತ್ರಾಮೃತವನ್ನು ಹೊಟ್ಟೆತುಂಬುವ ತನಕ ಕುಡಿಸುವಳು. ರುದ್ರಾಕ್ಷ ಮತ್ತು ಭಸ್ಮಲೇಪನದಿಂದ ದೇಹವನ್ನು ರಕ್ಷಿಸುವಳು. ನಿನ್ನ ಧ್ಯಾನವೆಂಬ ಮಂಚದಲ್ಲಿ ಇರಿಸಿ ಸಂರಕ್ಷಿಸುವಳು. ||೬೨||

* ನಡೆದು ಸವೆದ ಪಾದರಕ್ಷೆಯು ಪಶುಪತಿಯ ಶರೀರಕ್ಕೆ ಕಣ್ಣು ಹುಬ್ಬುಗಳ ಮಧ್ಯಸ್ಥಾನವಾಗುವುದು. ಬಾಯಿನಿಂದ ಉಗುಳುವ ನೀರು ತ್ರಿಪುರಾಂತನಿಗೆ ದಿವ್ಯಾಭಿಷೇಕವಾಗುವುದು. ಆಗಲೇ ಸ್ವಲ್ಪ ತಿಂದು ಮಿಕ್ಕ ಮಾಂಸವೇ ಹೊಸ ನೈವೇದ್ಯವಾಗುತ್ತದೆ. ಬೇಡನು ಭಕ್ತಶ್ರೇಷ್ಠನಾಗುತ್ತಾನೆ. ಆಶ್ಚರ್ಯ, ಭಕ್ತಿ ಏನನ್ನು ಮಾಡಲಾರದು. ||೬೩||

---

* ಆಚಾರ್ಯರು ಇಲ್ಲಿ ಬೇಡರ ಕಣ್ಣಪ್ಪನ ಕಥೆಯನ್ನು ವಿವರಿಸುವರು. ಆತ ಬಾಯಿನಿಂದ ನೀರು ತುಂಬಿಕೊಂಡು ಬಂದು ಅದನ್ನು ಶಿವನ ಮೇಲೆ

ವಕ್ಷಸ್ತಾಡನಮಂತಕಸ್ಯ ಕಠಿನಾಪಸ್ಮಾರಸಂಮರ್ದನಂ
ಭೂಭೃತ್ಪರ್ಯಟನಂ ನಮತ್ಸುರಶಿರಃ ಕೋಟೀರಸಂಘರ್ಷಣಂ।
ಕರ್ಮೇದಂ ಮೃದುಳಸ್ಯ ತಾವಕ ಪದದ್ವಂದ್ವಸ್ಯ ಗೌರೀಪತೇ
ಮಚ್ಚೇತೋಮಣಿಪಾದುಕಾವಿಹರಣಂ ಶಂಭೋ
ಸದಾಂಗೀಕುರು ॥೬೪॥

ವಕ್ಷಸ್ತಾಡನಶಂಕಯಾ ವಿಚಲಿತೋ ವೈವಸ್ವತೋ ನಿರ್ಜರಾಃ
ಕೋಟೀರೋಜ್ಜ್ವಲರತ್ನದೀಪಕಲಿಕಾನೀರಾಜನಂ ಕುರ್ವತೇ ।
ದೃಷ್ಟ್ವಾಮುಕ್ತಿವಧೂಸ್ತನೋತಿ ನಿಭೃತಾಶ್ಲೇಷಂ ಭವಾನೀಪತೇ
ಯಚ್ಚೇತಸ್ತವ ಪಾದಪದ್ಮಭಜನಂ ತಸ್ಯೇಹ ಕಿಂ ದುರ್ಲಭಂ
॥೬೫॥

ಕ್ರೀಡಾರ್ಥಂ ಸೃಜಸಿ ಪ್ರಪಂಚಮಖಿಲಂ ಕ್ರೀಡಾಮೃಗಾಸ್ತೇ
ಜನಾಃ
ಯತ್ಕರ್ಮಾಚರಿತಂ ಮಯಾ ಚ ಭವತಃ ಪ್ರೀತ್ಯೈ ಭವತ್ಯೇವ
ತತ್ ।
ಶಂಭೋ ಸ್ವಸ್ಯ ಕುತೂಹಲಸ್ಯ ಕರಣಂ ಮಚ್ಚೇಷ್ಟಿತಂ ನಿಶ್ಚಿತಂ
ತಸ್ಮಾನ್ಮಾಮಕರಕ್ಷಣಂ ಪಶುಪತೇ ಕರ್ತವ್ಯಮೇವತ್ವಯಾ
॥೬೬॥

ಬಹುವಿಧ ಪರಿತೋಷ ಬಾಷ್ಪಪೂರ
ಸ್ಫುಟ ಪುಲಕಾಂಕಿತ ಚಾರು ಭೋಗಭೂಮಿಂ ।
ಚಿರಪದ ಫಲಕಾಂಕ್ಷಿ ಸೇವ್ಯಮಾನಾಂ
ಪರಮ ಸದಾಶಿವ ಭಾವನಾಂ ಪ್ರಪದ್ಯೇ ॥೬೭॥

ಹೇ ಗೌರೀಪತೇ, ಶಂಭೋ, ಯಮನ ಎದೆಯನ್ನು ಒದೆದದ್ದು, ಕಠಿಣನಾದ ಅಪಸ್ಮಾರಾಸುರನನ್ನು ತುಳಿದದ್ದು, ಬೆಟ್ಟದಲ್ಲಿ ಅಲೆಯುವುದು, ನಮಸ್ಕರಿಸುತ್ತಿರುವ ದೇವತೆಗಳ ಕಿರೀಟ ನಿನ್ನ ಕಾಲಿಗೆ ಒತ್ತುತ್ತಿರುವುದು, ನಿನ್ನ ಪಾದಯುಗಳಕ್ಕೆ ಕಷ್ಟವನ್ನು ಕೊಡುತ್ತಿದೆ. ಆದಕಾರಣ ನನ್ನ ಮನಸ್ಸೆಂಬ ರತ್ನಮಯವಾದ ಪಾದರಕ್ಷೆಯನ್ನು ಮೆಟ್ಟಿ ವಿಹರಿಸು. ||೬೪||

ಹೇ ಭವಾನೀಪತೇ, ಯಾರು ನಿನ್ನ ಪಾದಪದ್ಮಗಳನ್ನು ಭಜಿಸುತ್ತಾರೆಯೊ ಅವರನ್ನು ಯಮನು ನೋಡಿ ತನ್ನ ಎದೆಯ ಮೇಲೆ ಅವನೆಲ್ಲಿ ಒದೆಯುವನೊ ಎಂದು ಅಂಜಿ ಓಡಿಹೋಗುವನು. ದೇವತೆಗಳು ತಮ್ಮ ಕಿರೀಟದಲ್ಲಿ ಧರಿಸಿರುವ ರತ್ನಗಳೆಂಬ ದೀಪದಿಂದ ಆರತಿಯನ್ನು ಮಾಡುವರು. ಮುಕ್ತಿವಧು ಗಾಢಾಲಿಂಗನವನ್ನು ನೀಡುತ್ತಾಳೆ. ಅಂತಹ ಭಕ್ತನಿಗೆ ಪ್ರಪಂಚದಲ್ಲಿ ಯಾವುದು ದುರ್ಲಭ. ||೬೫||

ಹೇ ಶಂಭೋ, ಹೇ ಪಶುಪತೇ, ನೀನು ಸಮಸ್ತ ಪ್ರಪಂಚವನ್ನು ಕ್ರೀಡಾರ್ಥಕ್ಕಾಗಿ ಸೃಷ್ಟಿಸುತ್ತಿರುವೆ. ಜನರು ನಿನ್ನ ಆಟಕ್ಕಾಗಿ ಇರುವ ಪ್ರಾಣಿಗಳು. ನನ್ನಿಂದ ಯಾವ ಕರ್ಮ ಮಾಡಲ್ಪಟ್ಟಿತೋ ಅದು ನಿನ್ನ ಪ್ರೀತಿಗಾಗಿ. ನನ್ನ ಕರ್ಮ ನಿನ್ನ ಸಂತೋಷಕ್ಕೆಂದು ನಿಶ್ಚಯಿಸಲ್ಪಟ್ಟಿದೆ. ಆದಕಾರಣ ನನ್ನ ಕರ್ತವ್ಯವನ್ನು ನೀನು ವಹಿಸಿಕೊಳ್ಳಬೇಕಾಗಿದೆ. ||೬೬||

ಬಹುಬಗೆಯ ಸಂತೋಷ, ಅಶ್ರುವಾರಿ ಮತ್ತು ರೋಮಾಂಚನಗಳಿಂದ ವ್ಯಕ್ತವಾದ ಆನಂದಾನುಭವಕ್ಕೆ ಆಸರೆಯಾದ, ಚಿರಪದವನ್ನು ಆಶಿಸುವ ಮುನಿಗಳಿಂದ ಸೇವಿಸುತ್ತಿರುವ, ಪರಮಸದಾಶಿವನ ಧ್ಯಾನದಲ್ಲಿ ಶರಣುಹೊಂದುತ್ತೇನೆ. ||೬೭||

ಉಗುಳುತ್ತಿದ್ದುದು, ತಾನು ತಿಂದು ಮಿಕ್ಕ ಮಾಂಸವನ್ನು ದೇವರಿಗೆ ನೀಡುವುದು, ಮೊದಲು ತನ್ನ ಒಂದು ಕಣ್ಣನ್ನು ಕಿತ್ತು ಶಿವನಿಗೆ ಇತ್ತ ಮೇಲೆ ಮತ್ತೊಂದು ಕಣ್ಣನ್ನು ಕೊಡುವ ಪ್ರಸಂಗ ಬಂತು. ಆಗ ಶಿವನ ಒಂದು ಕಣ್ಣಿನ ಸ್ಥಾನದಲ್ಲಿ ತನ್ನ ಪಾದರಕ್ಷೆಯನ್ನು ಗುರುತಾಗಿ ಇಟ್ಟು, ಅನಂತರ ತನ್ನ ಎರಡನೆ ಕಣ್ಣನ್ನು ಕಿತ್ತು ಆ ಪಾದರಕ್ಷೆ ಇದ್ದ ಸ್ಥಳದಲ್ಲಿ ಇಡುವನು. ಇದರಿಂದ ಶಿವ ಮೆಚ್ಚಿ ಅವನನ್ನು ಪ್ರಮಥಗಣಗಳಲ್ಲಿ ಒಬ್ಬನನ್ನಾಗಿ ಮಾಡಿದನೆಂದು ಕಾಳಹಸ್ತಿಕ್ಷೇತ್ರ ಮಹಾತ್ಮ್ಯೆಯಲ್ಲಿದೆ.

ಅಮಿತಮುದಮೃತಂ ಮುಹುರ್ದುಹಂತೀಂ
ವಿಮಲ ಭವತ್ಪದ ಗೋಷ್ಠಮಾವಸಂತೀಂ ।
ಸದಯ ಪಶುಪತೇ ಸುಪುಣ್ಯಪಾಕಾಂ
ಮಮ ಪರಿಪಾಲಯ ಭಕ್ತಿಧೇನುಮೇಕಾಂ ||೬೮||

ಜಡತಾ ಪಶುತಾ ಕಳಂಕಿತಾ
ಕುಟಿಲಚರತ್ವಂ ಚ ನಾಸ್ತಿ ಮಯಿದೇವ ।
ಅಸ್ತಿಯದಿ ರಾಜಮೌಳೇ
ಭವದಾಭರಣಸ್ಯ ನಾಸ್ಮಿ ಕಿಂ ಪಾತ್ರಂ ||೬೯||

ಅರಹಸಿ ರಹಸಿ ಸ್ವತಂತ್ರಬುಧ್ಯಾ
ಪರಿವಸಿತುಂ ಸುಲಭಃ ಪ್ರಸನ್ನಮೂರ್ತಿಃ ।
ಅಗಣಿತ ಫಲದಾಯಕಃ ಪ್ರಭುರ್ಮೇ
ಜಗದಧಿಕೋ ಹೃದಿ ರಾಜಶೇಖರೋಸ್ತಿ ||೭೦||

ಆರೂಢ ಭಕ್ತಿಗುಣ ಕುಂಚಿತ ಭಾವಚಾಪ
ಯುಕ್ತೈಶ್ಶಿವಸ್ಮರಣ ಬಾಣಗಣೈರಮೋಘೈಃ ।
ನಿರ್ಜಿತ್ಯಕಿಲ್ಬಿಷ ರಿಪೂನ್ವಿಜಯೀ ಸುಧೀಂದ್ರಃ
ಸಾನಂದಮಾವಹತಿ ಸುಸ್ಥಿರರಾಜಲಕ್ಷ್ಮೀಮ್ ||೭೧||

ಧ್ಯಾನಾಂಜನೇನ ಸಮವೇಕ್ಷ್ಯ ತಮಃಪ್ರದೇಶಂ
ಭಿತ್ವಾ ಮಹಾಬಲಿಭಿ ರೀಶ್ವರನಾಮಮಂತ್ರೈಃ ।
ದಿವ್ಯಾಶ್ರಿತಂ ಭುಜಗಭೂಷಣ ಮುದ್ವಹಂತಿ
ಯೇ ಪಾದಪದ್ಮಮಿಹ ಶಿವ ತೇ ಕೃತಾರ್ಥಾಃ ||೭೨||

ಹೇ ದಯಾಳು, ಪಶುಪತೇ, ಬಾರಿಬಾರಿಗೆ ಬೇಕಾದಷ್ಟು ಸಂತೋಷವೆಂಬ ಅಮೃತವನ್ನು ಕರೆಯುತ್ತಲಿರುವ ನಿನ್ನ ಪದಗಳೆಂಬ ಪವಿತ್ರವಾದ ದನದ ಕೊಟ್ಟಿಗೆಯಲ್ಲಿ, ಪುಣ್ಯಫಲರೂಪವಾಗಿರುವ ಒಂಟಿಯಾಗಿರುವ ನನ್ನ ಭಕ್ತಿ ಎಂಬ ಆಕಳನ್ನು ಕೂಡ ನೀನು ಸೇರಿಸಿಕೊ. ||೬೮||

ಹೇ ದೇವ, ಹೇ ರಾಜಮೌಳೇ, ನನ್ನಲ್ಲಿ ಜಡತ್ವ ಪಶುತ್ವ ಕಳಂಕತ್ವ ಕುಟಿಲತೆಗಳು ಇಲ್ಲ. ಹಾಗೆ ಒಂದುವೇಳೆ ಇದ್ದರೂ ನಿನ್ನ ಪರಿಗ್ರಹಕ್ಕೆ ಯೋಗ್ಯನಾಗಲಾರೆನೆ? (ಕಳಂಕಿತನಾದ ಚಂದ್ರನನ್ನು ನೀನು ಶಿರೋಭೂಷಣನಾಗಿ ಧರಿಸಿರುವಾಗ ನನ್ನನ್ನು ಸ್ವೀಕರಿಸಬೇಕು ಎಂದು ಭಾವ) ||೬೯||

ಬಹಿರಂಗದಲ್ಲಾಗಲಿ ಅಂತರಂಗದಲ್ಲಾಗಲಿ ಸ್ವತಂತ್ರವಾಗಿ ಸೇವಿಸುವುದಕ್ಕೆ ಸುಲಭವಾಗಿರುವ ಪ್ರಸನ್ನಮೂರ್ತಿಯು, ಅಗಣಿತಫಲವನ್ನು ನೀಡುವಂತಹ ಲೋಕೇಶ್ವರನಾದ ರಾಜಶೇಖರನು ನನ್ನ ಹೃದಯದಲ್ಲಿ ನೆಲೆಸಿರುವನು. ||೭೦||

ವಿದ್ವಾಂಸರು, ಭಕ್ತಿಯೆಂಬ ಹುರಿಯಿಂದ ಬಿಗಿಸಲ್ಪಟ್ಟ ಭಾವವೆಂಬ ಬಿಲ್ಲಿನೊಂದಿಗೆ ಸಂಧಿಸಲ್ಪಟ್ಟಿರುವ, ವ್ಯರ್ಥವಾಗದ ಶಿವಧ್ಯಾನವೆಂಬ ಬಾಣಗಳಿಂದ ಪಾಪಶತ್ರುವನ್ನು ಜಯಿಸಿ ಸಾನಂದವಾದ ಮೋಕ್ಷಸಾಮ್ರಾಜ್ಯ ಲಕ್ಷ್ಮಿಯನ್ನು ಪಡೆಯುತ್ತಾರೆ. ||೭೧||

ಹೇ ಶಿವ, ಧ್ಯಾನಾಂಜನದಿಂದ ನೋಡಿ, ಮಹಾಬಲಿಯಿಂದಲೂ ಪೂಜೋಪಚಾರ ಮಂತ್ರದಿಂದಲೂ ತಮಃಪ್ರದೇಶವನ್ನು ಭೇದಿಸಿ, ದೇವತೆಗಳಿಂದ ಆಶ್ರಯಿಸಲ್ಪಟ್ಟಿರುವ ಭುಜಗಭೂಷಣನಾದ ನಿನ್ನ ಪಾದಪದ್ಮಗಳನ್ನು ಯಾರು ಪಡೆಯುತ್ತಾರೆಯೊ ಅವರು ಇಹಲೋಕದಲ್ಲಿ ಕೃತಾರ್ಥರು. ||೭೨||

ಭೂದಾರತಾಮುದವಹದ್ಯದಪೇಕ್ಷಯಾ ಶ್ರೀ
ಭೂದಾರ ಏವ ಕಿಮತಸ್ಸುಮತೇ ಲಭಸ್ವ ।
ಕೇದಾರಮಾಕಲಿತ ಮುಕ್ತಿಮಹೌಷಧೀನಾಂ
ಪಾದಾರವಿಂದಭಜನಂ ಪರಮೇಶ್ವರಸ್ಯ ॥೭೩॥

ಆಶಾಪಾಶಕ್ಲೇಶದುರ್ವಾಸನಾದೇಃ
ಭೇದೋದ್ಯುಕ್ತೈರ್ದಿವ್ಯ ಗಂಧೈರಮಂದೈಃ ।
ಆಶಾಶಾಟೀಕಸ್ಯ ಪಾದಾರವಿಂದಂ
ಚೇತಃಪೇಟೀಂ ವಾಸಿತಾಂ ಮೇ ತನೋತು ॥೭೪॥

ಕಲ್ಯಾಣಿನಂ ಸರಸಚಿತ್ರಗತಿಂ ಸವೇಗಂ
ಸರ್ವೇಂಗಿತಜ್ಞ ಮನಘಂ ಧ್ರುವಲಕ್ಷಣಾಢ್ಯಂ ।
ಚೇತಸ್ತುರಂಗಮಧಿರುಹ್ಯ ಚರ ಸ್ಮರಾರೇ
ನೇತಸ್ಸಮಸ್ತಜಗತಾಂ ವೃಷಭಾಧಿರೂಢ ॥೭೫॥

ಭಕ್ತಿರ್ಮಹೇಶ ಪದಪುಷ್ಕರಮಾವಸಂತೀ
ಕಾದಂಬಿನೀಯ ಕುರುತೇ ಪರಿತೋಷವರ್ಷಂ ।
ಸಂಪೂರಿತೋಭವತಿ ಯಸ್ಯ ಮನಸ್ತಟಾಕ
ಸ್ತಜ್ಜನ್ಮಸಸ್ಯಮಖಿಲಂ ಸಫಲಂ ಚ ನಾನ್ಯತ್ ॥೭೬॥

ಬುದ್ಧಿಸ್ಥಿರಾಭವಿತುಮೀಶ್ವರ ಪಾದಪದ್ಮ
ಸಕ್ತಾ ವಧೂರ್ವಿರಹಿಣೀವ ಸದಾ ಸ್ಮರಂತಿ ।
ಸದ್ಭಾವನಾಸ್ಮರಣದರ್ಶನಕೀರ್ತನಾದಿ
ಸಮ್ಮೋಹಿತೇವ ಶಿವಮಂತ್ರಜಪೇನ ಮೀತೇ ॥೭೭॥

ಹೇ ಸುಮತೇ, ಯಾರ ಅಪೇಕ್ಷೆಯಿಂದ ಶ್ರೀದೇವಿಭೂದೇವಿಗೆ ಒಡೆಯನಾದ ವಿಷ್ಣುವು ವರಾಹಾವತಾರವನ್ನು ಮಾಡಿದನೊ, ಅಂತಹ ಮುಕ್ತಿ ಎಂಬ ಮಹೌಷಧಿಗೆ ಗಡ್ಡೆಯಾಗಿರುವಂತಹ ಪರಮೇಶ್ವರನ ಪಾದಪದ್ಮವನ್ನು ಹೊಂದು. ||೭೩||

ಆಶಾಪಾಶಕ್ಲೇಶದುರ್ವಾಸನೆಯನ್ನು ಹೋಗಲಾಡಿಸುವಂತ ಪರಿಮಳದಿಂದ ಕೂಡಿದ ದಿಗಂಬರನ ಪಾದಾರವಿಂದ ನನ್ನ ಮನಸ್ಸೆಂಬ ಪೆಟ್ಟಿಗೆಯನ್ನು ಪರಿಮಳಸಹಿತವನ್ನಾಗಿ ಮಾಡಲಿ. ||೭೪||

ಹೇ ಸ್ಮರಾರೆ, ಸಮಸ್ತಲೋಕಗಳಿಗೂ ಅಧಿಪತಿಯೇ, ವೃಷಭಾರೂಢನೆ, ಶುಭಕರವಾದ, ಸರಸಗತಿಯುಳ್ಳಂತಹ, ವೇಗವಾದ, ಎಲ್ಲ ಇಂಗಿತಗಳನ್ನು ತಿಳಿದಿರುವ, ದೋಷರಹಿತವಾದ, ಶುಭಲಕ್ಷಣವಿರುವ ನನ್ನ ಮನಸ್ಸೆಂಬ ಕುದುರೆಯನ್ನು ಏರಿ ಸಂಚರಿಸು. ||೭೫||

ಹೇ ಮಹೇಶ, ನಿನ್ನ ಚರಣಗಳೆಂಬ ಆಕಾಶದಲ್ಲಿ ವಾಸಿಸುತ್ತಿರುವ ಭಕ್ತಿಮೋಡ ಆನಂದದ ಮಳೆಗರೆಯುತ್ತದೆ. ಅದರಿಂದ ನನ್ನ ಮನಸ್ತಟಾಕ ತುಂಬಿ ಭಕ್ತಿಸಸ್ಯ ಬೆಳೆಯುವುವು. ಮತ್ತಾವ ಕಳೆಯೂ ಬೆಳೆಯುವುದಿಲ್ಲ, ||೭೬||

ಹೇ ಈಶ್ವರ, ಪ್ರಿಯನನ್ನಗಲಿದ ಸ್ತ್ರೀಯಂತೆ ಬುದ್ಧಿಯು ಸದಾ ನಿನ್ನ ಚರಣಾಂಬುಜದಲ್ಲಿ ಆಸಕ್ತವಾಗಿ, ಯಾವಾಗಲೂ ಅದನ್ನೇ ಸ್ಮರಿಸುತ್ತ ಅದನ್ನೇ ಜಪಿಸುತ್ತ, ಯೋಗ್ಯವಾದ ಭಾವನ ದರ್ಶನ ಕೀರ್ತನ ಇವುಗಳಲ್ಲಿ ಸ್ಥಿರಾಸಕ್ತಿಯನ್ನು ಪಡೆಯುವುದನ್ನು ಚಿಂತಿಸುತ್ತಿದೆ. ||೭೭||

ಸದುಪಚಾರವಿಧಿಷ್ವನುಬೋಧಿತಾಂ
ಸವಿನಯಾಂ ಸುಹೃದಂ ಸಮುಪಾಶ್ರಿತಾಂ ।
ಮಮ ಸಮುದ್ಧರ ಬುದ್ಧಿಮಿಮಾಂ ಪ್ರಭೋ
ವರಗುಣೇನ ನವೋಢವಧೂಮಿವ ॥೭೮॥

ನಿತ್ಯಂ ಯೋಗಿಮನಃಸರೋಜದಳಸಂಚಾರಕ್ಷಮಸ್ತ್ವತ್ಕ್ರಮಃ
ಶಂಭೋ ತೇನ ಕಥಂ ಕಠೋರ ಯಮರಾಡ್ವಕ್ಷಃ ಕವಾಟಕ್ಷತಿಃ ।
ಅತ್ಯಂತಂ ಮೃದುಲಂ ತದಂಘ್ರಿಯುಗಳಂ ಹಾ ಮೇ
ಮನಶ್ಚಿಂತಯ
ತ್ಯೇತಲ್ಲೋಚನಗೋಚರಂ ಕುರು ವಿಭೋ ಹಸ್ತೇನ
ಸಂವಾಹಯೇ ॥೭೯॥

ವಿಷ್ಯತ್ಯೇಷ ಜನಿಂ ಮನೋಸ್ಯಕಠಿಣಂ ತಸ್ಮಿನ್ನಟಾನೀತಿ
ಮದ್ರಕ್ಷಾಯೈ ಗಿರಿಸೀಮ್ನಿ ಕೋಮಲಪದನ್ಯಾಸಃ
ಪುರಾಭ್ಯಾಸಿತಃ ।
ನೋಚೇದ್ದಿವ್ಯಗೃಹಾಂತರೇಷು ಸುಮಸ್ತಲ್ಪೇಷು ವೇದ್ಯಾದಿಷು
ಪ್ರಾಯಸ್ಸತ್ಸು ಶಿಲಾತಲೇಷು ನಟನಂ ಶಂಭೋ ಕಿಮರ್ಥಂ
ತವ ॥೮೦॥

ಕಂಚಿತ್ಕಾಲಮುಮಾಮಹೇಶ ಭವತಃ ಪಾದಾರವಿಂದಾರ್ಚನೈಃ
ಕಂಚಿದ್ಧ್ಯಾನಸಮಾಧಿಭಿಶ್ಚ ನತಿಭಿಃ ಕಂಚಿತ್ಕಥಾಕರ್ಣನೈಃ ।
ಕಂಚಿತ್ಕಂಚಿದವೇಕ್ಷಣೈಶ್ಚ ನುತಿಭಿಃ ಕಂಚಿದ್ದಶಾಮೀದೃಶೀಂ
ಯಃ ಪ್ರಾಪ್ನೋತಿ ಮುದಾ ತ್ವದರ್ಪಿತಮನಾ ಜೀವನ್
ಸಮುಕ್ತಃ ಖಲು ॥೮೧॥

ಹೇ ಪ್ರಭೋ, ಯೋಗ್ಯವಾದ ಉಪಚಾರಮಾಡುವುದರಲ್ಲಿ ಸರಿಯಾಗಿ ಬೋಧಿಸಲ್ಪಟ್ಟವಳಾಗಿಯೂ ವಿನಯವುಳ್ಳವಳಾಗಿಯೂ ಒಳ್ಳೆಯ ಮನಸ್ಸನ್ನು ಪಡೆದಿರುವ ಪ್ರಾಪ್ತವಯಸ್ಕಳಾದ ಮುಗ್ಧೆಯಂತೆ ಇರುವ ಒಳ್ಳೆಯ ಗುಣಗಳಿಂದ ಕೂಡಿರುವ ನನ್ನ ಮನಸ್ಸನ್ನು ಅನುಗ್ರಹಿಸು. ||೭೮||

ಹೇ ಶಂಭೋ, ವಿಭೋ ಯಾವಾಗಲೂ, ಯೋಗಿಗಳ ಮನಸ್ಸಿನ ಸರೋಜದ ಮೇಲೆ ನಡೆಯುವ ನಿನ್ನ ಕಾಲು ಬಹಳ ಮೃದುವಾದುದು. ಅಂತಹ ಕಾಲುಗಳು ಯಮನ ಎದೆಯನ್ನು ಹೇಗೆ ಒದೆಯಿತು. ಅದನ್ನೇ ನನ್ನ ಮನಸ್ಸು ಚಿಂತಿಸುತ್ತಿದೆ. ನಿನ್ನ ಆ ಪಾದಯುಗಳವನ್ನು ನನಗೆ ತೋರು. ಆದನ್ನು ನಾನು ಕೈಯಿಂದ ಒತ್ತುತ್ತೇನೆ. ||೭೯||

ಹೇ ಶಂಭೋ, ನಾನು ಮುಂದೆ ಹುಟ್ಟುತ್ತೇನೆ, ಇವನ ಮನಸ್ಸು ತುಂಬ ಕಠಿಣ, ಅದರಲ್ಲಿ ನೀನು ತಿರುಗಾಡಬೇಕಾಗುವುದು ಎಂದು ನನ್ನನ್ನು ರಕ್ಷಿಸುವುದಕ್ಕಾಗಿಯೆ ಕೈಲಾಸದಲ್ಲಿ ನೀನು ನಡೆಯುವುದನ್ನು ಅಭ್ಯಾಸ ಮಾಡಿದೆ. ಹಾಗಿಲ್ಲದೇ ಇದ್ದರೆ ದಿವ್ಯಗೃಹದಲ್ಲಿ ಪುಷ್ಪ ರತ್ನ ಜಗಲಿ ಮುಂತಾದುವುಗಳ ಮೇಲೆ ನಡೆಯುವವನು ಕಲ್ಲಿನಮೇಲೆ ನೀನು ನಟನಮಾಡಿದ್ದು ಏತಕ್ಕೆ? ||೮೦||

ಹೇ ಉಮಾಮಹೇಶ, ಒಂದುಸಲ ನಿನ್ನ ಪಾದಪೂಜೆ, ಒಂದುಸಲ ನಿನ್ನ ಧ್ಯಾನಸಮಾಧಿ, ಒಂದುಸಲ ನಿನಗೆ ನಮಸ್ಕಾರಮಾಡುವುದು, ಒಂದುಸಲ ನಿನ್ನ ಮೂರ್ತಿದರ್ಶನದಿಂದಲೂ, ಒಂದುಸಲ ನಿನ್ನ ಸ್ತೋತ್ರಗಳನ್ನು ಹೇಳುತ್ತಲೂ ಯಾವನು ನಿನ್ನಲ್ಲಿ ಅರ್ಪಿತ ಮನಸ್ಸುಳ್ಳವನಾಗಿ ಸಂತೋಷದಿಂದ ಇಂತಹ ಸ್ಥಿತಿಯನ್ನು ಪಡೆಯುವನೊ ಅವನು ಜೀವನ್ಮುಕ್ತನಲ್ಲವೆ? ||೮೧||

ಬಾಣತ್ವಂ ವೃಷಭತ್ವಮರ್ಧವಪುಷಾ ಭಾರ್ಯಾತ್ವಮಾರ್ಯಾಪತೇ
ಘೋಣಿತ್ವಂ ಸಖಿತಾ ಮೃದಂಗವಹತಾಂ ಚೇತ್ಯಾದಿರೂಪಂ ದಧೌ ।
ತ್ವತ್ಪಾದೇ ನಯನಾರ್ಪಣಂ ಚ ಕೃತವಾನ್ ತ್ವದ್ದೇಹಭಾಗೋ ಹರಿಃ
ಪೂಜ್ಯಾತ್ಪೂಜ್ಯತರಃ ಸ ಏವ ಹಿ ನ ಚೇತ್ಕೋ ವಾ ತದನ್ಯೋಽಧಿಕಃ ॥೮೨॥

ಜನನಮೃತಿಯುತಾನಾಂ ಸೇವಯಾ ದೇವತಾನಾಂ
ನ ಭವತಿ ಸುಖಲೇಶಃ ಸಂಶಯೋ ನಾಸ್ತಿ ತತ್ರ ।
ಅಜನಿಮಮೃತರೂಪಂ ಸಾಂಬಮೀಶಂ ಭಜಂತೇ
ಯ ಇಹ ಪರಮಸೌಖ್ಯಂ ತೇ ಹಿ ಧನ್ಯಾ ಲಭಂತೇ ॥೮೩॥

ಶಿವ ತವ ಪರಿಚಾರ್ಯಾಃ ಸನ್ನಿಧಾನಾಯ ಗೌರ್ಯಾಃ
ಭವ ಮಮ ಗುಣಧುರ್ಯಾಂ ಬುದ್ಧಿಕನ್ಯಾಂ ಪ್ರದಾಸ್ಯೇ ।
ಸಕಲಭುವನಬಂಧೋ ಸಚ್ಚಿದಾನಂದಸಿಂಧೋ
ಸದಯ ಹೃದಯಗೇಹೇ ಸರ್ವದಾ ಸಂವಸ ತ್ವಂ ॥೮೪॥

ಜಲಧಿಮಥನದಕ್ಷೋ ನೈವ ಪಾತಾಳಭೇದೀ
ನ ಚ ವನಮೃಗಯಾಯಾಂ ನೈವ ಲುಬ್ಧಃ ಪ್ರವೀಣಃ ।
ಅಶನಕುಸುಮಭೂಷಾವಸ್ತ್ರಮುಖ್ಯಾಂ ಸಪರ್ಯಾಂ
ಕಥಯ ಕಥಮಹಂ ತೇ ಕಲ್ಪಯಾನೀಂದುಮೌಳೇ ॥೮೫॥

ಪೂಜಾದ್ರವ್ಯಸಮೃದ್ಧಯೋ ವಿರಚಿತಾಃ ಪೂಜಾಂಕಥಂ ಕರ್ಮಹೇ
ಪಕ್ಷಿತ್ವಂ ನ ಚ ವಾ ಕೀಟತ್ವಮಪಿ ನ ಪ್ರಾಪ್ತಂ ಮಯಾ ದುರ್ಲಭಮ್ ।
ಜಾನೇ ಮಸ್ತಕಮಂಘ್ರಿಪಲವಮುಮಾಜಾನೇ ನತೇಽಹಂ ವಿಭೋ
ನ ಜ್ಞಾತಂ ಹಿ ಪಿತಾಮಹೇನ ಹರಿಣಾ ತತ್ತ್ವೇನ ತದ್ರೂಪಿಣಾ ॥೮೬॥

ಹೇ ಪಾರ್ವತೀಪತೇ, ವಿಷ್ಣು ಬಾಣವಾದನು, ವೃಷಭವಾದನು, ತನ್ನ ಅರ್ಧದೇಹದಿಂದ ಭಾರ್ಯೆಯಾದನು, ವರಾಹವಾದನು, ನಿನ್ನ ಸ್ನೇಹಿತನಾದನು, ಮೃದಂಗಬಾರಿಸಿದನು. ಇಂತಹ ಪಾತ್ರಗಳನ್ನೆಲ್ಲ ಅವನು ಧರಿಸಬೇಕಾಯಿತು. ಅಲ್ಲದೆ ನಿನ್ನ ಅವಯವದಲ್ಲಿ ಒಂದು ಭಾಗವಾಗಿ ತನ್ನ ಕಣ್ಣಿನಿಂದ ನಿನ್ನ ಪಾದವನ್ನು ಅರ್ಚಿಸಿದನು. ಇದರಿಂದ ಪೂಜ್ಯರಿಗಿಂತ ಅವನು ಪೂಜ್ಯತರನಾದನು. ಹಾಗೆ ಮಾಡದೆ ಇದ್ದರೆ ಅವನಿಗಿಂತ ಬೇರೊಬ್ಬ ಅಧಿಕನು ಯಾವನು ಇರುತ್ತಿದ್ದ? ||೮೨||

ಜನನ ಮರಣಗಳಿಗೆ ತುತ್ತಾಗುವ ಕ್ಷುದ್ರದೇವತೆಗಳ ಸೇವೆಯಿಂದ ಸುಖ ಲೇಶವೂ ಇಲ್ಲ. ಈ ವಿಷಯದಲ್ಲಿ ಸಂದೇಹವೇ ಇಲ್ಲ. ಇಲ್ಲಿ ಯಾರು ಅಜನೊ ಅಮೃತಸ್ವರೂಪನೊ ಅಂತಹ ಪಾರ್ವತೀವಲ್ಲಭನಾದ ಪರಮೇಶ್ವರನನ್ನು ಭಜಿಸುವರೋ ಅವರು ಧನ್ಯರು. ಅವರು ಪರಮಸೌಖ್ಯವನ್ನು ಪಡೆಯುತ್ತಾರೆ. ||೮೩||

ಹೇ ಶಿವ, ಹೇ ಭವ, ಹೇ ಸಕಲ ಭುವನಬಂಧೋ, ಸಚ್ಚಿದಾನಂದಸಿಂಧೋ, ಪಾರ್ವತೀದೇವಿಯೊಂದಿಗೆ ನಿನ್ನ ಸೇವೆಯಲ್ಲಿ ಜಾಗರೂಕಳಾಗಿರುವಂತಹ ಸದ್ಗುಣಸಂಪನ್ನಳಾದ ನನ್ನ ಬುದ್ಧಿಕನ್ಯೆಯನ್ನು ನಿನಗೆ ಅರ್ಪಿಸುತ್ತೇನೆ. ಹೇ ದಯಾಳು, ನನ್ನ ಹೃದಯ ಗೃಹದಲ್ಲಿ ಸರ್ವದಾ ನೀನು ನೆಲಸು. ||೮೪||

ಹೇ ಇಂದುಮೌಳೇ, ನಾನು ಸಮುದ್ರಮಥನದಲ್ಲಿ ಸಮರ್ಥನಲ್ಲ. ಪಾತಾಳವನ್ನು ಪ್ರವೇಶಿಸುವವನೂ ಅಲ್ಲ. ಬೇಟೆಯಾಡುವುದರಲ್ಲಿ ಪ್ರವೀಣನೂ ಅಲ್ಲ. ಹೀಗಿರುವಾಗ ನಾನು ನಿನಗೆ ಭೋಜನ ಪುಷ್ಪ ಆಭರಣ ವಸ್ತ್ರ ಮೊದಲಾದ ಪೂಜೆಯನ್ನು ಮಾಡುವುದು ಹೇಗೆ ಹೇಳು. ||೮೫||

ಹೇ ಉಮಾನಾಥ, ವಿಭೋ, ಪೂಜಾದ್ರವ್ಯ ಸಮೃದ್ಧಿಯಾಗಿದ್ದರೂ ನಿನ್ನ ಪೂಜೆಯನ್ನು ಹೇಗೆ ಮಾಡುವುದು? ನನಗೆ ದುರ್ಲಭವಾದ ಪಕ್ಷಿತ್ವವಾಗಲಿ (ಬ್ರಹ್ಮನಾದಂತೆ) ವರಾಹತ್ವವಾಗಲಿ (ವಿಷ್ಣು ಆದಂತೆ) ಪ್ರಾಪ್ತವಾಗಿಲ್ಲ. ಯಾರು ನಿಜವಾಗಿ ಆ ರೂಪವನ್ನು ಪಡೆದರೋ ಅಂತಹ ಬ್ರಹ್ಮ ಮತ್ತು ವಿಷ್ಣುವಿಗೇ ನಿನ್ನ ಶಿರ ಮತ್ತು ಪಾದಗಳನ್ನು ತಿಳಿಯಲು ಆಗಲಿಲ್ಲ. ಅಂತಹ ನಿನ್ನ ಶಿರ ಮತ್ತು ಪದಕಮಲಗಳನ್ನು ನಾನು ಪೂಜಿಸುವುದೆಂತು? ||೮೬||

ಅಶನಂ ಗರಳಂ ಫಣೀ ಕಲಾಪೋ
ವಸನಂ ಚರ್ಮ ಚ ವಾಹನಂ ಮಹೋಕ್ಷಃ ।
ಮಮ ದಾಸ್ಯಾಸಿ ಕಿಂ ಕಿಮಸ್ತಿ ಶಂಭೋ
ತವ ಪಾದಾಂಬುಜ ಭಕ್ತಿಮೇವ ದೇಹಿ ||೮೭||

ಯದಾ ಕೃತಾಂಭೋನಿಧಿಸೇತುಬಂಧನಃ
ಕರಸ್ತಲಾಧಃ ಕೃತಪರ್ವತಾಧಿಪಃ ।
ಭವಾನಿ ತೇ ಲಂಘಿತ ಪದ್ಮಸಂಭವ
ಸ್ತದಾ ಶಿವಾರ್ಚಾಸ್ತವಭಾವನಾಕ್ಷಮಃ ||೮೮||

ನತಿಭಿರ್ನುತಿಭಿಸ್ತ್ವಮೀಶ ಪೂಜಾ
ವಿಧಿಭಿರ್ಧ್ಯಾನಸಮಾಧಿಭಿ ರ್ನ ತುಷ್ಟಃ ।
ಧನುಷಾ ಮುಸಲೇನ ಚಾಶ್ಮಭಿರ್ವಾ
ವದ ತೇ ಪ್ರೀತಿಕರಂ ತಥಾ ಕರೋಮಿ ||೮೯||

ವಚಸಾ ಚರಿತಂ ವದಾಮಿ ಶಂಭೋ
ರಹಮುದ್ಯೋಗವಿಧಾಸು ತೇ ಪ್ರಸಕ್ತಃ ।
ಮನಸಾಕೃತಿಮೀಶ್ವರಸ್ಯ ಸೇವೇ
ಶಿರಸಾ ಚೈವ ಸದಾಶಿವಂ ನಮಾಮಿ ||೯೦||

ಆದ್ಯಾವಿದ್ಯಾ ಹೃದ್ಗತಾ ನಿರ್ಗತಾಸೀ
ದ್ವಿದ್ಯಾ ಹೃದ್ಯಾ ಹೃದ್ಗತಾ ತ್ವತ್ಪ್ರಸಾದಾತ್ ।
ಸೇವೇ ನಿತ್ಯಂ ಶ್ರೀಕರಂ ತ್ವತ್ಪದಾಬ್ಜಂ
ಭಾವೇ ಮುಕ್ತಿರ್ಭಾಜನಂ ರಾಜಮೌಳೇ ||೯೧||

ಹೇ ಶಂಭೋ, ನಿನ್ನ ಆಹಾರ ವಿಷ, ಆಭರಣ ಸರ್ಪ, ವಸನವೇ ಚರ್ಮ, ವಾಹನ ವೃಷಭ. ಹೀಗಿರುವಾಗ ನನಗೆ ನೀನು ಏನನ್ನು ಕೊಡಬಲ್ಲೆ? ಆದರೂ ನಿನ್ನ ಪಾದಪದ್ಮಗಳ ಮೇಲೆ ಭಕ್ತಿಯನ್ನು ಅನುಗ್ರಹಿಸು. ||೮೭||

ಹೇ ಶಿವ, ನಾನೆಂದು ಸಮುದ್ರದಲ್ಲಿ ಸೇತುಬಂಧನವನ್ನು ಮಾಡಬಲ್ಲೆನೊ (ರಾಮನಾದರೆ), ಕೈಯಿಂದ ವಿಂಧ್ಯಪರ್ವತವನ್ನು ಕೆಳಗೆ ಇಡಬಲ್ಲೆನೊ (ಅಗಸ್ತ್ಯನಾದರೆ), ಬ್ರಹ್ಮನಂತೆ ಆಗುವೆನೊ ಆಗ ನಿನ್ನ ಅರ್ಚನ ಸ್ತೋತ್ರ ಧ್ಯಾನ ಸಾಧ್ಯ. ||೮೮||

ಹೇ ಈಶ, ನೀನು ನಮಸ್ಕಾರ ಪೂಜೆ ಧ್ಯಾನ ಸಮಾಧಿಗಳಿಂದ ತುಷ್ಟನಾದವನಲ್ಲ. ಬಿಲ್ಲು ಮುಸಲ ಕಲ್ಲುಗಳಿಂದ ನಿನ್ನನ್ನು ಹೇಗೆ ಮೆಚ್ಚಿಸುವುದು ಹೇಳು. ಆ ಪ್ರಕಾರವೇ ನಾನು ಮಾಡುತ್ತೇನೆ. ||೮೯||

ನಾನು ಸ್ಥಿರವಾಗಿ ನಿನ್ನಲ್ಲಿ ಚಿತ್ತವನ್ನು ಅರ್ಪಿಸುವುದಕ್ಕಾಗಿ ಸಂಕಲ್ಪವನ್ನು ಮಾಡಿದವನಾಗಿ ವಾಕ್ಕಿನಿಂದ ಪರಮೇಶ್ವರನ ಚರಿತ್ರವನ್ನು ಹೇಳುತ್ತೇನೆ. ಮನಸ್ಸಿನಿಂದ ಈಶ್ವರನ ಆಕಾರವನ್ನು ಧ್ಯಾನಿಸುತ್ತೇನೆ. ತಲೆಯಿಂದ ಸದಾಶಿವನನ್ನು ನಮಸ್ಕರಿಸುತ್ತೇನೆ. ||೯೦||

ಹೇ ರಾಜಮೌಳೀ, ನಿನ್ನ ಅನುಗ್ರಹದಿಂದ ನನ್ನಲ್ಲಿ ಚಿರಕಾಲವೂ ಇದ್ದ ಅವಿದ್ಯೆ ಕಳೆದು ಹೋಯಿತು. ಮನೋಜ್ಞವಾದ ಬ್ರಹ್ಮವಿದ್ಯೆ ಮನಸ್ಸನ್ನು ಪ್ರವೇಶಿಸಿತು. ಮಂಗಳಪ್ರದವಾಗಿಯೂ ಮೋಕ್ಷಕ್ಕೆ ಪಾತ್ರವಾಗಿಯೂ ಇರುವ ನಿನ್ನ ಪಾದಾಂಬುಜಗಳನ್ನು ನಿತ್ಯವೂ ಹೃದಯದಲ್ಲಿ ಧ್ಯಾನಿಸುತ್ತೇನೆ. ||೯೧||

ದೂರೀಕೃತಾನಿ ದುರಿತಾನಿ ದುರಕ್ಷರಾಣಿ
ದೌರ್ಭಾಗ್ಯ ದುಃಖ ದುರಹಂಕೃತಿ ದುರ್ವಚಾಂಸಿ ।
ಸಾರಂ ತ್ವದೀಯ ಚರಿತಂ ನಿತರಾಂ ಪಿಬಂತಂ
ಗೌರೀಶ ಮಾಮಿಹ ಸಮುದ್ಧರ ಸತ್ಕಟಾಕ್ಷೈಃ ||೯೨||

ಸೋಮಕಲಾಧರ ಮೌಳೌ
ಕೋಮಲಘನ ಕಂಧರೇ ಮಹಾ ಮಹಸಿ ।
ಸ್ವಾಮಿನಿ ಗಿರಿಜಾನಾಥೇ
ಮಾಮಕ ಹೃದಯಂ ನಿರಂತರಂ ರಮತಾಮ್ ||೯೩||

ಸಾ ರಸನಾ ತೇ ನಯನೇ ತಾವೇವ
ಕರೌ ಸ ಏವಕೃತಕೃತ್ಯಃ ।
ಯಾ ಯೇ ಯೌ ಯೋ ಭರ್ಗಂ
ವದತೀಕ್ಷೇತೇ ಸದಾರ್ಚತಸ್ಮರತಿ ||೯೪||

ಅತಿಮೃದುಳೌ ತವ ಚರಣಾ
ಅತಿಕಠಿನಂ ತೇ ಮನೋ ಭವಾನೀಶ ।
ಇತಿ ವಿಚಿಕಿತ್ಸಾಂ ಸಂತ್ಯಜ
ಶಿವಕಥಮಾಸೀದ್ಗಿರೌ ತಥಾವೇಶಃ ||೯೫||

ಧೈರ್ಯಾಂಕುಶೇನ ನಿಭೃತಂ
ರಭಸಾದಾಕೃಷ್ಯ ಭಕ್ತಿಶೃಂಖಲಯಾ ।
ಪುರಹರ ಚರಣಾಲಾನೇ
ಹೃದಯ ಮದೇಭಂ ಬಧಾನ ಚಿದ್ಯಂತ್ರೈಃ ||೯೬||

ಹೇ ಗೌರೀಶ, ಪಾಪ, ಕೆಟ್ಟ ಹಣೆಯಬರಹ, ದುಃಖ, ದುರಹಂಕೃತಿ, ದುರ್ವಚನ ಇವೆಲ್ಲ ದೂರ ಸರಿದವು. ಸಾರಭೂತವಾದ ನಿನ್ನ ಚರಿತ್ರವನ್ನು ಚೆನ್ನಾಗಿ ಮನಸ್ಸಿನಿಂದ ಪಾನಮಾಡುತ್ತಿರುವ ನನ್ನನ್ನು ಈ ಲೋಕದಲ್ಲಿ ನಿನ್ನ ಸತ್ಕಟಾಕ್ಷದಿಂದ ಉದ್ಧರಿಸು. ||೯೨||

ಸೋಮಕಲಾಧರಮೌಳಿಯಾಗಿರುವ, ಕೋಮಲವಾದ ನೀಲಮೇಘ ದೋಪಾದಿ ಕತ್ತುಳ್ಳಂತಹ, ಪ್ರಭುವಾದಂತಹ, ಗಿರಿಜಾನಾಥನ ಮಹಾತೇಜಸ್ಸಿ ನಲ್ಲಿ ನನ್ನ ಮನಸ್ಸು ನಿರಂತರ ವಿಹರಿಸಲಿ. ||೯೩||

ಪಾಪವನ್ನು ಹೋಗಲಾಡಿಸುವ ಪರಮೇಶ್ವರನನ್ನು ಯಾವುದು ಉಚ್ಚರಿಸುತ್ತದೆಯೋ, ಯಾವುದು ಅರ್ಚಿಸುತ್ತದೆಯೋ, ಯಾವುದು ಯಾವಾ ಗಲೂ ಧ್ಯಾನಿಸುತ್ತದೆಯೋ, ಅದೇ ನಾಲಗೆ, ಅವೇ ಕಣ್ಣುಗಳು, ಅವೇ ಕೈ ಗಳು. ಅವನೇ ಕೃತಕೃತ್ಯನು. ||೯೪||

ಹೇ ಭವಾನೀಪತೆ, ಶಿವ, ನಿನ್ನ ಪಾದಗಳು ಅತಿ ಮೃದು, ನನ್ನ ಮನಸ್ಸು ಅತಿ ಕಠಿಣ ಎಂಬ ಸಂಶಯವನ್ನು ಬಿಡು. ನಿನಗೆ ಕೈಲಾಸಪರ್ವತದಲ್ಲಿ ಸಂಚಾರ ಹೇಗೆ ಆಯಿತು ? ||೯೫||

ಹೇ ಪುರಹರ, ನನ್ನ ಹೃದಯವೆಂಬ ಮದ್ದಾನೆಯನ್ನು ಧೈರ್ಯಾಂಕುಶ ದಿಂದ ಸುಮ್ಮನಿರಿಸಿ, ಭಕ್ತಿಸರಪಳಿಯಿಂದ ಅದನ್ನು ಬಲವಾಗಿ ಸೆಳೆದು ಚಿತ್ ಯಂತ್ರದಿಂದ ನಿನ್ನ ಪಾದವೆಂಬ ಕಂಬಕ್ಕೆ ಕಟ್ಟು. ||೯೬||

ಪ್ರಚರತ್ಯಭಿತಃ ಪ್ರಗಲ್ಭವೃತ್ಯಾ
ಮದವಾನೇಷಮನಃಕರೀ ಗರೀಯಾನ್ ।
ಪರಿಗೃಹ್ಯ ನಯೇನ ಭಕ್ತಿರಜ್ಜ್ವಾ
ಪರಮಸ್ಥಾಣುಪದಂ ದೃಢಂ ನಯಾಮುಂ ॥೯೭॥

ಸರ್ವಾಲಂಕಾರಯುಕ್ತಾಂ ಸರಳಪದಯುತಾಂ ಸಾಧುವೃತ್ತಾಂ ಸುವರ್ಣಾಂ
ಸದ್ಭಿಸಂಸ್ತೂಯಮಾನಾಂ ಸರಸಗುಣಯುತಾಂ ಲಕ್ಷಿತಾಂ ಲಕ್ಷಣಾಢ್ಯಾಂ ।
ಉದ್ಯದ್ಭೂಷಾವಿಶೇಷಾ ಮುಪಗತವಿನಯಾಂ ದ್ಯೋತಮಾನಾರ್ಥರೇಖಾಂ
ಕಲ್ಯಾಣೀಂ ದೇವ ಗೌರೀಪ್ರಿಯ ಮಮ ಕವಿತಾಕನ್ಯಾಂ ತ್ವಂ ಗೃಹಾಣ ॥೯೮॥

ಇದಂ ತೇ ಯುಕ್ತಂ ವಾ ಪರಮಶಿವ ಕಾರುಣ್ಯಜಲಧೇ
ಗತೌ ತಿರ್ಯಗ್ರೂಪಂ ತವ ಪದಶಿರೋದರ್ಶನಧಿಯಾ ।
ಹರಿಬ್ರಹ್ಮಾಣೌ ತೌ ದಿವಿ ಭುವಿ ಚರಂತೌ ಸ್ತ್ರದಯುತೌ
ಕಥಂ ಶಂಭೋ ಸ್ವಾಮಿನ್ ಕಥಯ ಮಮ ವೇದ್ಯೋಸಿ ಪುರತಃ ॥೯೯॥

ಸ್ತೋತ್ರೇಣಾಲಮಹಂ ಪ್ರವಚ್ಮಿನ ಮೃಷಾ ದೇವಾ ವಿರಿಂಚಾದಯ
ಸ್ತುತ್ಯಾನಾಂ ಗಣನಾ ಪ್ರಸಂಗ ಸಮಯೇ ತ್ವಾಮಗ್ರಗಣ್ಯಂ ವಿದುಃ ।
ಮಾಹಾತ್ಮ್ಯಗ್ರವಿಚಾರಣಪ್ರಕರಣೇ ಧಾನಾತುಷಸ್ತೋಮವ
ದ್ಧೂತಾಸ್ತ್ವಾಂ ವಿದುರುತ್ತಮೋತ್ತಮಫಲಂ ಶಂಭೋ ಭವತ್ಸೇವಕಾಃ ॥೧೦೦॥

ಹೇ ಪರಮಾತ್ಮನೆ, ನನ್ನ ಮನಸ್ಸೆಂಬ ಮದಿಸಿದ ಆನೆ ಸ್ವತಂತ್ರವಾಗಿ ಎಲ್ಲಾ ಕಡೆಯಲ್ಲಿಯೂ ಚರಿಸುತ್ತಿದೆ. ಅದನ್ನು ಭಕ್ತಿ ಎಂಬ ಹಗ್ಗದಿಂದ ಉಪಾಯವಾಗಿ ಹಿಡಿದು ಈಶ್ವರನ ಪಾದವೆಂಬ ಮರದ ಬುಡಕ್ಕೆ ಸೇರಿಸು. ||೯೭||

ಹೇ ಗೌರೀಪ್ರಿಯನೆ, ಸರ್ವಾಲಂಕಾರಯುಕ್ತಳಾದ, ಸರಳಪದಗಳಿಂದ ಕೂಡಿದ, ಯೋಗ್ಯವಾದ ವೃತ್ತಗಳಿರುವ, ಒಳ್ಳೆಯ ಅಕ್ಷರಗಳಿಂದ ಕೂಡಿದ, ವಿದ್ವಾಂಸರಿಂದ ಶ್ಲಾಘಿಸಲ್ಪಟ್ಟಿರುವ, ಕಾವ್ಯಗುಣಗಳೊಂದಿಗೆ ಕೂಡಿರುವ, ವಸ್ತುಪ್ರಶಂಸಾರೂಪವಾದ ಕಾವ್ಯಲಕ್ಷಣಗಳನ್ನುಳ್ಳಂತಹ, ಅಲಂಕಾರಗಳನ್ನುಳ್ಳಂತಹ, ಪ್ರಾಪ್ತವಾದ ನಿಯಮವುಳ್ಳಂತಹ, ಪ್ರಕಾಶಿಸಲ್ಪಟ್ಟ ಅರ್ಥವುಳ್ಳಂತಹ ಕಲ್ಯಾಣಿಯಾದ ನನ್ನ ಕವಿತಾಕನ್ಯೆಯನ್ನು ನೀನು ಸ್ವೀಕರಿಸು. ||೯೮||

ಹೇ ಪರಮಶಿವ, ಕಾರುಣ್ಯಜಲಧೇ, ಶಂಭೋ, ನಿನ್ನ ಪಾದ ಮತ್ತು ಶಿರವನ್ನು ನೋಡುವ ಇಚ್ಛೆಯಿಂದ ತಿರ್ಯಗ್ರೂಪವನ್ನು ಹೊಂದಿದ ಹರಿ ಬ್ರಹ್ಮರು ಆಕಾಶ ಮತ್ತು ಭೂಮಿಯಲ್ಲಿ ಸಂಚರಿಸಿ ಶ್ರಮಪಟ್ಟರೂ ಅವರಿಗೇ ಕಾಣದವನು ನನ್ನ ಕಣ್ಣುಗಳಿಗೆ ಹೇಗೆ ಗೋಚರನಾಗುತ್ತೀಯೆ, ಇದು ಆಶ್ಚರ್ಯ. ||೯೯||

ಹೇ ಶಂಭೋ, ನಾನು ಸುಳ್ಳನ್ನು ಹೇಳುವುದಿಲ್ಲ. ಹೊಗಳಿಕೆ ಸಾಕು. ಬ್ರಹ್ಮನೇ ಮೊದಲಾದವರು ಸ್ತುತಿಸುತ್ತಿರುವ ದೇವರನ್ನು ಗಣನೆಗೆ ತೆಗೆದುಕೊಳ್ಳುವ ಪ್ರಸಂಗದಲ್ಲಿ ನಿನ್ನನ್ನು ಅಗ್ರಗಣ್ಯನೆಂದು ತಿಳಿದಿರುವರು. ನಿನ್ನ ಭಕ್ತರು ಮಹಿಮೆಯನ್ನು ವಿಚಾರಿಸುವಾಗ ಇತರ ದೇವತೆಗಳು ಹೊಟ್ಟಿನಂತೆ ಹಾರಿ ಹೋಗಿ ನೀನೊಬ್ಬನೇ ಗಟ್ಟಿ ಕಾಳಿನಂತೆ ನಿಲ್ಲುವೆ. ||೧೦೦||

ಮುದ್ರಕರು :

ಡಿ. ರಾಜರತ್ನಂ, ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

		ರೂ.	ಪೈ.
ದಾರಿಯಲ್ಲಿ ದೀಪಧಾರಿ	....	೧	೦
ಶ್ರೀ ಗುರುದೇವರ ವಚನ	....	೧	೦
ಧನ್ಯತೆಗೆ ದಾರಿ	....	೧	೦
ಅನುಷ್ಠಾನ ವೇದಾಂತ	....	೧	೦
ಧ್ಯಾನ ಚಿಂತನಾಧಾರೆ	....	೧	೦
ವೇದಾಂತ	....	೦	೬೨
ವಿದ್ಯಾಭ್ಯಾಸ	....	೦	೬೨
ಹಿಂದೂ ಧರ್ಮಸಾರ	....	೦	೬೨
ವರ್ತಮಾನ ಭಾರತ	....	೦	೬೨
ವಿವೇಕವಾಣಿ	....	೦	೬೨
ನನ್ನ ಗುರುದೇವ	....	೦	೫೦
ಜ್ಞಾನಮಾರ್ಗ	....	೦	೫೦
ಭಕ್ತಿಮಾರ್ಗ	....	೦	೫೦
ಪುನರ್ಜನ್ಮ	....	೦	೫೦
ಕೇನೋಪನಿಷತ್	....	೦	೫೦
ಈಶಾವಾಸ್ಯ ಉಪನಿಷತ್	....	೦	೫೦
ಶಿವಾನಂದಲಹರೀ	....	೦	೫೦
ಚಿಕಾಗೋ ಉಪನ್ಯಾಸ	....	೦	೩೭
ಆರತಿ	....	೦	೩೭
ಶ್ರೀರಾಮಕೃಷ್ಣ (ಸಂಕ್ಷಿಪ್ತ ಜೀವನ)	....	೦	೩೧
ಸ್ವಾಮಿ ವಿವೇಕಾನಂದ ,,	....	೦	೩೧
ಶ್ರೀ ಶಾರದಾದೇವಿ ,,	....	೦	೩೧
ಮುಮುಕ್ಷು ಲಕ್ಷಣ	....	೦	೨೫
ನನ್ನ ಜೀವನ ಮತ್ತು ಧ್ಯೇಯ	....	೦	೨೫
ಈಶ್ವರಾನುರಾಗ	....	೦	೨೫
ನೊಂದ ಜೀವಕ್ಕೆ ಭರವಸೆ	....	೦	೨೫
ಭಾರತ ಮಹಿಳೆ	....	೦	೨೫
ಕರ್ಮರಹಸ್ಯ	....	೦	೨೫
ಸಾಧನ	....	೦	೨೫
ಪವಹಾರಿ ಬಾಬಾ	....	೦	೨೫
ದೇವದೂತ ಏಸುಕ್ರಿಸ್ತ	....	೦	೨೫
ಧ್ಯಾನ	....	೦	೨೫

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

		ರೂ.	ಪೈ.
ಶ್ರೀ ರಾಮಕೃಷ್ಣ ವಚನವೇದ ಪೂರ್ವಾರ್ಧ		೧೦	
ಶ್ರೀ ರಾಮಕೃಷ್ಣ ವಚನವೇದ ಉತ್ತರಾರ್ಧ		೧೦	
ಕೊಲಂಬೊ ಇಂದ ಆಲ್ಮೋರಕೆ	....	೫	
ಸಂವಾದ ತರಂಗಿಣಿ	....	೫	
ಶ್ರೀ ರಾಮಕೃಷ್ಣ ಉಪದೇಶಾಮೃತ	....	೩	೫೦
ಸ್ವಾಮಿ ವಿವೇಕಾನಂದ (ಕುವೆಂಪು)	....	೩	೫೦
ಪ್ರವಚನಾದಿ	....	೩	೫೦
ಶ್ರೀರಾಮಕೃಷ್ಣ ಶಿಷ್ಯಕೋಟಿ	....	೩	೫೦
ಶ್ರೀಮದ್ಭಗವದ್ಗೀತಾ	....	೩	೫೦
ನಾ ಕಂಡಂತೆ ನನ್ನ ಗುರುದೇವ	....	೩	೫೦
ಸ್ತವಕುಸುಮಾಂಜಲಿ	....	೩	೨೫
ಭಗವಾನ್ ಶ್ರೀ ರಾಮಕೃಷ್ಣ	....	೩	೦
ಪತ್ರಮಾಲೆ	....	೩	
ಜ್ಞಾನಯೋಗ	....	೩	
ಗುರುವಿನೊಡನೆ ದೇವರಡಿಗೆ	....	೩	
ಜೀವ ಈಶ್ವರ ಧರ್ಮ	....	೩	೦
ರಾಜಯೋಗ	....	೨	೬೨
ಶ್ರೀ ಶಾರದಾದೇವಿ ಸಂಭಾಷಣೆ	....	೨	[illegible]
ಗೀತಾಪತ್ರಗಳು	....	೨	೫
ಮಿಂಚುನೋಟಕೆ ಹಿಂದೂಧರ್ಮ	....	೨	೫
ಶ್ರೀ ಶಾರದಾದೇವಿ	....	೨	೦
ಸಾಧಕನ ಕೈದೀವಿಗೆ	....	೨	
ಪರಮಾರ್ಥ ಪ್ರಸಂಗ	....	೨	
ಕರ್ಮಯೋಗ	....	೧	೫
ಸನಾತನ ಭಾರತ	....	೧	೫೦
ಬ್ರಹ್ಮಾನಂದ ವಚನ ಸುಧೆ	....	೧	೨೫
ಶ್ರೀ ರಾಮಕೃಷ್ಣ ಉಪನಿಷತ್	....	೧	[illegible]
ಪರಿವ್ರಾಜಕ	....	೧	
ಪ್ರಾಚ್ಯ ಮತ್ತು ಪಾಶ್ಚಾತ್ಯ	....	೧	
ಭಕ್ತಿಯೋಗ	....	೧	
ಭಾರತದಲ್ಲಿ ಶಕ್ತಿಪೂಜೆ	....	೧	
ಭಕ್ತಿ : ಗೌಣೀ ಮತ್ತು ಪರಾ	....	೧	